ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟಿ

# ಜನತಾವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜೂನ್ 25, 2021

ಸಂಪುಟ : 48 ಸಂಚಿಕೆ : 42 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com

## ಜಿಲ್ಲೆಯಲ್ಲಿ ಪಾಸಿಟಿವಿಟಿ ಶೇ.4.27ಕ್ಕೆ ಇಳಿಕೆ

### ಕೋವಿಡ್ ಕೇರ್ ಸೆಂಟರ್‌ಗಳ ಸಂಖ್ಯೆ 28 ರಿಂದ 10ಕ್ಕೆ ಇಳಿಕೆ



### ಐಸೋಲೇಷನ್, ವೆಂಟಿಲೇಟರ್ ಬೆಡ್‌ಗಳಿಗೆ ತಗ್ಗಿದ ಬೇಡಿಕೆ

ದಾವಣಗೆರೆ, ಜೂ.24- ಜಿಲ್ಲೆಯಲ್ಲಿ ಕೊರೊನಾ ಸೋಂಕು ಪಾಸಿಟಿವಿಟಿ ದರವು ಜೂ.23ರ ವರದಿಯಂತೆ ಶೇ.4.27ಕ್ಕೆ ಇಳಿಕೆಯಾಗಿದೆ. ಆ ಮೂಲಕ ಜಿಲ್ಲೆಯಲ್ಲಿದ್ದ ಕೋವಿಡ್ ಕೇರ್ ಸೆಂಟರ್‌ಗಳ ಸಂಖ್ಯೆಯೂ ಇಳಿಕೆಯಾಗಿದೆ.

ದಿನೇ ದಿನೇ ಸೋಂಕಿತರ ಸಂಖ್ಯೆ ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಲವು ದಿನಗಳಿಂದ ಆಸ್ಪತ್ರೆಗಳಲ್ಲಿ ಐಸೋಲೇಷನ್ , ವೆಂಟಿಲೇಟರ್ ಬೆಡ್‌ಗಳಿಗೆ ಬೇಡಿಕೆ ತಗ್ಗಿದೆ.

ಜಿಲ್ಲೆಯಲ್ಲಿ ಸೋಂಕು ಹೆಚ್ಚಳ ತಡೆಯಲು, ಸೋಂಕಿನ ಸರಪಳಿ ತುಂಡು ಮಾಡಲು ಜಿಲ್ಲಾಡಳಿತವು ಕೋವಿಡ್ ಕೇರ್ ಸೆಂಟರ್‌ಗಳನ್ನು ಹೆಚ್ಚು ಮಾಡಲು ತೀರ್ಮಾನಿಸಿತ್ತು.


ಅದರಂತೆ ದಾವಣಗೆರೆ ನಗರ ಹಾಗೂ ತಾಲ್ಲೂಕುಗಳಲ್ಲಿ ಸುಮಾರು 28 ಕೋವಿಡ್ ಕೇರ್ ಸೆಂಟರ್‌ಗಳನ್ನು ತೆರೆದು ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆರಂಭದಲ್ಲಿ ಸುಮಾರು 2500 ಸೋಂಕಿತರು ಈ ಸೆಂಟರ್‌ಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಸೋಂಕು ದೃಢಪಟ್ಟಾಗ ಹೆಚ್ಚಾಗಿ ಜನತೆ ಹೋಮ್ ಐಸೋಲೇಷನ್‌ನಲ್ಲಿ ಇರಲು ಬಯಸುತ್ತಿದ್ದರು. ಮಧ್ಯಮ ವರ್ಗದ ಜನತೆಯಂತೂ ಕೋವಿಡ್ ಕೇರ್ ಸೆಂಟರ್‌ಗಳಿಗೆ ಬರಲು ಒಪ್ಪುತ್ತಿರಲಿಲ್ಲ. ಇದರಿಂದ ಸೋಂಕು ಕುಟುಂಬದ ಇತರೆ ಸದಸ್ಯರುಗಳಿಗೂ ತಗುಲಿ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿತ್ತು.

ಇದನ್ನು ಮನಗಂಡ ಜಿಲ್ಲಾಡಳಿತವು ದಾವಣಗೆರೆಯಲ್ಲಿ ತರಳಬಾಳು ಸಂಸ್ಥೆಗೆ ಸೇರಿದ್ದ ಒಂದು (3ನೇ ಪುಟಕ್ಕೆ)

| ತಾಲ್ಲೂಕುವಾರು ಪಾಸಿಟಿವಿಟಿ ದರ (%) | |
|---|---|
| ದಾವಣಗೆರೆ | 8.37 |
| ಚನ್ನಗಿರಿ | 4.07 |
| ಹರಿಹರ | 4.10 |
| ಜಗಳೂರು | 0.34 |
| ಹೊನ್ನಾಳಿ/ನ್ಯಾಮತಿ | 1.37 |

### 4,83,871 ಜನರಿಗೆ ಲಸಿಕೆ



18-44 ವರ್ಷ ವಯೋಮಿತಿಯವರು ಇಂದು 16,942 ಜನ ಪ್ರಥಮ ಡೋಸ್ ಲಸಿಕೆ ಪಡೆದಿದ್ದಾರೆ. ಇಲ್ಲಿಯವರೆಗೆ 84,958 ಜನ ಲಸಿಕೆ ಪಡೆದಿದ್ದಾರೆ. 57 ಜನ ಇಂದು ಎರಡನೇ ಡೋಸ್ ಪಡೆದಿದ್ದು ಇಲ್ಲಿವರೆಗೆ 480 ಜನ ಪಡೆದಿದ್ದಾರೆ. 45 ರಿಂದ 59 ವರ್ಷ ವಯಸ್ಸಿನವರು ಇಲ್ಲಿಯವರೆಗೆ 1,69,222 ಜನ ಪ್ರಥಮ ಡೋಸ್ ಹಾಗೂ 26,900 ಎರಡನೇ ಡೋಸ್ ಪಡೆದಿದ್ದಾರೆ.

60 ವರ್ಷ ಮೇಲ್ಪಟ್ಟವರು ಇಲ್ಲಿವರೆಗೆ 1,18,054 ಜನ ಪ್ರಥಮ ಹಾಗೂ 38,781 ಜನ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ.

ಒಟ್ಟಾರೆ ಜಿಲ್ಲೆಯಲ್ಲಿಂದು 22,022 ಜನರಿಗೆ ಲಸಿಕೆ ನೀಡಲಾಗಿದ್ದು, ಇಲ್ಲಿಯವರೆಗೆ 4,83,871 ಜನರಿಗೆ ಲಸಿಕೆ ನೀಡಲಾಗಿದೆ. ಸೋಮವಾರ ನಗರದ ಜಿಲ್ಲಾಸ್ಪತ್ರೆ ಒಂದರಲ್ಲಿಯೇ18-44 ವರ್ಷ ವಯೋಮಾನದ 1020 ಜನರು ಲಸಿಕೆ ಪಡೆದಿದ್ದಾರೆ.

## ಪ್ರವಾಸೋದ್ಯಮ ವಲಯಕ್ಕೆ ಲಸಿಕೆ

### 50% ಆಸ್ತಿ ತೆರಿಗೆ ಶುಲ್ಕ ವಿನಾಯಿತಿ, 3 ತಿಂಗಳ ವಿದ್ಯುತ್ ಶುಲ್ಕ ಮನ್ನಾ

ಬೆಂಗಳೂರು, ಜೂ.24- ಕೋವಿಡ್ ಸಂಕಷ್ಟಕ್ಕೆ ಸಿಲುಕಿರುವ ಪ್ರವಾಸೋದ್ಯಮ ವಲಯಕ್ಕೆ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಪಾರ್ಕ್‌ಗಳಿಗೆ ಆಸ್ತಿತೆರಿಗೆ, ವಿದ್ಯುತ್ ಶುಲ್ಕ ಹಾಗೂ ಅಬಕಾರಿ ಶುಲ್ಕದಲ್ಲಿ ಹಲವಾರು ರಿಯಾಯಿತಿಗಳನ್ನು ನೀಡಿ ಆದೇಶ ಹೊರಡಿಸಿದೆ.

ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನರಂಜನಾ ಪಾರ್ಕ್ ಗಳಿಗೆ ಪ್ರಸಕ್ತ ಸಾಲಿನಲ್ಲಿ (2021 - 2022 ) ಶೇಕಡ 50ರಷ್ಟು ಆಸ್ತಿ ತೆರಿಗೆ ಶುಲ್ಕ ವಿನಾಯಿತಿ ನೀಡಿದೆ. ಅಲ್ಲದೆ ಪ್ರಸಕ್ತ ಸಾಲಿನ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳ ವಿದ್ಯುಚ್ಛಕ್ತಿ ಶುಲ್ಕ ವನ್ನೂ ಮನ್ನಾ ಮಾಡಿದೆ.

ಅಬಕಾರಿ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳಲ್ಲಿ ಶೇ. 50ರಷ್ಟು ಮೊತ್ತವನ್ನು ಪಾವತಿಸುವುದು ಮತ್ತು ಉಳಿದ ಶೇ. 50ರಷ್ಟು



ಮೊತ್ತವನ್ನು ಈ ವರ್ಷದ ಡಿಸೆಂಬರ್ 31 ರೊಳಗೆ ಪಾವತಿಸಲು 6 ತಿಂಗಳ ಕಾಲಾವಧಿ ನೀಡಲಾಗಿದೆ.

ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡಿರುವ ಪ್ರತಿ ಪ್ರವಾಸಿ ಮಾರ್ಗದರ್ಶಿಗೆ 5000 ರೂಪಾಯಿಗಳನ್ನು ಅವರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತದೆ.

ರಾಜ್ಯ ಸರ್ಕಾರ ವಿವಿಧ ಪ್ರವಾಸೋದ್ಯಮ ಉದ್ದಿಮೆದಾರರಿಗೆ ನೀಡಿರುವ ಪುನಶ್ಚೇತನ ಸಹಾಯವು ಸಂಕಷ್ಟ ಕಾಲದಿಂದ ಹೊರಬಂದು ಮುಂದಿನ ದಿನಗಳಲ್ಲಿ ರಾಜ್ಯಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಉತ್ತಮ ಸೇವೆ ಸಲ್ಲಿಸಲು ಸಹಕಾರಿಯಾಗಿದೆ ಎಂದು ಕರ್ನಾಟಕ ಪ್ರವಾಸೋದ್ಯಮ ಸೊಸೈಟಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ಸರ್ಕಾರದ ಸಹಾಯ ಹಸ್ತದಿಂದ ಆತಿಥ್ಯ ಹಾಗೂ ಪ್ರವಾಸೋದ್ಯಮ ಕ್ಷೇತ್ರವು ಚೇತರಿಕೆ ಕಾಣಲು ಸಹಕಾರಿಯಾಗಿದ್ದು, ಪ್ರವಾಸೋದ್ಯಮ ಕ್ಷೇತ್ರವನ್ನೇ ನಂಬಿಕೊಂಡು ಬದುಕುತ್ತಿರುವ ಲಕ್ಷಾಂತರ ನೌಕರರಿಗೆ ಹಾಗೂ ಉದ್ಯೋಗಿಗಳಿಗೆ ಪುನರ್ಜನ್ಮ ನೀಡಿದಂತಾಗಿದೆ

ಈ ಕ್ಷೇತ್ರದಲ್ಲಿ ಮುಂದಿನ ದಿನಗಳಲ್ಲಿ ರಾಜ್ಯಕ್ಕೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಸಹಕಾರಿಯಾಗಲಿದೆ ಹಾಗೂ ಪ್ರವಾಸೋದ್ಯಮ ಕ್ಷೇತ್ರದ ಆರ್ಥಿಕ ವಹಿವಾಟು ಹೆಚ್ಚಾಗಿ ರಾಜ್ಯದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಸಹ ರಾಜ್ಯ ಪ್ರವಾಸೋದ್ಯಮ ಸೊಸೈಟಿ ಪದಾಧಿಕಾರಿಗಳು ಹೇಳಿದ್ದಾರೆ .



### ನಗುತಾವ ಕೈ ಬಳೆ...!

ಜಿಲ್ಲೆಯಲ್ಲಿ ಲಾಕ್‌ಡೌನ್ ಪರಿಣಾಮ ಮಹಿಳೆಯರು ಬಳೆ ಕೊಳ್ಳಲೂ ಸಹ ಅಡಚಣೆಯಾಗಿತ್ತು. ಆದರೆ ಸೋಂಕು ಇಳಿಕೆಯಾದ ಕಾರಣ ಜಿಲ್ಲಾಡಳಿತವು ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಗೊಳಿಸಿದೆ. ಈ ಹಿನ್ನೆಲೆಯಲ್ಲಿ ದಾವಣಗೆರೆ ಮಂಡಿಪೇಟೆ ಬೀದಿ ಬದಿ ಮಹಿಳೆಯೊಬ್ಬರು ಬಳೆ ತೊಡಿಸಿಕೊಳ್ಳುತ್ತಿರುವ ಚಿತ್ರವಿದು.

## ಪೆಟ್ರೋಲ್, ಡೀಸೆಲ್ ಮತ್ತೆ ಏರಿಕೆ

ನವದೆಹಲಿ, ಜೂ. 24 – ಗುರುವಾರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು ಕ್ರಮವಾಗಿ 26 ಪೈಸೆ ಹಾಗೂ 27 ಪೈಸೆಯಷ್ಟು ಹೆಚ್ಚಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ತಿಳಿಸಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿರುವುದರಿಂದ ಈ ಬೆಳವಣಿಗೆಯಾಗಿದೆ. ಆರ್ಥಿಕ ಚೇತರಿಕೆಯ ನಿರೀಕ್ಷೆಯಿಂದಾಗಿ ಕಚ್ಚಾ ತೈಲದ ಬೆಲೆ ಏರುಮುಖವಾಗಿದೆ.





ಇಂದಿನ ಮಟ್ಟ : 153 ಅಡಿ
ಒಳ ಹರಿವು: 4872 ಕ್ಯೂಸೆಕ್ಸ್
ಹೊರ ಹರಿವು : 80 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 137.7 ಅಡಿ

## ಜು. 31ರ ಒಳಗೆ ಆಂತರಿಕ ಮೌಲ್ಯಮಾಪನ ಪ್ರಕಟಿಸಲು ಸೂಚನೆ

ನವದೆಹಲಿ, ಜೂ. 24 – ರಾಜ್ಯಗಳ ಮಂಡಳಿಗಳು 12ನೇ ತರಗತಿ ಪರೀಕ್ಷೆಯ ಆಂತರಿಕ ಮೌಲ್ಯಮಾಪನ ಫಲಿತಾಂಶವನ್ನು ಜುಲೈ 31ರ ಒಳಗೆ ಪ್ರಕಟಿಸಬೇಕು ಎಂದು ಸುಪ್ರೀಂ ಕೋರ್ಟ್ ಗಡುವು ನೀಡಿದೆ. ಪ್ರತಿ ಮಂಡಳಿಯು ಆಂತರಿಕ ಮೌಲ್ಯಮಾಪನಕ್ಕೆ ತನ್ನದೇ ಆದ ಸೂತ್ರ ಹೊಂದಬಹುದು ಎಂದು ನ್ಯಾಯಾಲಯ ತಿಳಿಸಿದೆ. ಏಕರೂಪದ ಮೌಲ್ಯಮಾಪನಕ್ಕೆ ಯಾವುದೇ ಆದೇಶ ಹೊರಡಿಸದ ನ್ಯಾಯಾಲಯ, ಒಂದು ಸೂತ್ರ ಎಲ್ಲರಿಗೂ ಅನ್ವಯಿಸಲಾಗದು ಎಂದು ತಿಳಿಸಿದೆ.

ಮೌಲ್ಯಮಾಪನಕ್ಕಾಗಿ ರಾಜ್ಯ ಮಂಡಳಿಗಳು ಹತ್ತು ದಿನಗಳ ಒಳಗೆ ಅಧಿಸೂಚನೆ ಹೊರಡಿಸಬೇಕು ಎಂದೂ ನ್ಯಾಯಾಲಯ ಗಡುವು ನೀಡಿದೆ.

## 118 ಪಾಸಿಟಿವ್ 38 ಗುಣಮುಖ

ದಾವಣಗೆರೆ, ಜೂ.24- ಜಿಲ್ಲೆಯಲ್ಲಿ ಗುರುವಾರ 118 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 3 ಜನರು ಮೃತಪಟ್ಟಿದ್ದಾರೆ. 38 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 64, ಹರಿಹರ 13, ಜಗಳೂರು 7, ಚನ್ನಗಿರಿ 19, ಹೊನ್ನಾಳಿ 9 ಹಾಗೂ ಹೊರ ಜಿಲ್ಲೆಯ ಐವರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 1703 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 521 ಜನರು ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ. ಒಬ್ಬರಲ್ಲೂ ಬ್ಲಾಕ್ ಫಂಗಸ್ ಕಾಣಿಸಿಕೊಂಡಿದ್ದು, 54 ಸಕ್ರಿಯ ಪ್ರಕರಣಗಳಿವೆ.

## ಜನರಿಗೆ ಆತ್ಮಸ್ಥೈರ್ಯ ತುಂಬಲು ಕಾಂಗ್ರೆಸ್ ಅಭಿಯಾನ

### ಕೊರೊನಾದಿಂದ ನೊಂದ ಜನರ ತಲುಪಲು ರಾಷ್ಟ್ರವ್ಯಾಪಿ ತಿಂಗಳ ಕಾಲ ಕಾರ್ಯಕ್ರಮ



ಬೆಂಗಳೂರು, ಜೂ. 24 - ಕೋವಿಡ್‌ನಿಂದಾಗಿ ಸಾವು-ನೋವು ಉಂಡವರು, ಉದ್ಯೋಗ, ಆರೋಗ್ಯ ಕಳೆದುಕೊಂಡವರು, ಆರ್ಥಿಕವಾಗಿ ಸಂಕಷ್ಟಕ್ಕೀಡಾದ ರೈತರು, ಕಾರ್ಮಿಕರು, ವರ್ತಕರು, ಬಡವರು ಸೇರಿದಂತೆ, ಎಲ್ಲ ವರ್ಗದ ಜನರಿಗೆ ಆತ್ಮಸ್ಥೈರ್ಯ ತುಂಬಿ, ಅವರಿಗೆ ನೆರವಾಗಲು ಕಾಂಗ್ರೆಸ್ ಪಕ್ಷ 30 ದಿನಗಳ ಅಭಿಯಾನ ಹಮ್ಮಿಕೊಂಡಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ ಸಮಯದಲ್ಲಿ ಸರ್ಕಾರ ಏನು ಮಾಡಿತು ಎಂಬುದು ಬಹಳ ಮುಖ್ಯ. ದೇಶ ಹಾಗೂ ರಾಜ್ಯದಲ್ಲಿ ಸಂಕಷ್ಟಕ್ಕೀಡಾದವರಿಗೆ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು ಎಂದು ಸರ್ಕಾರವನ್ನು ಕಾಂಗ್ರೆಸ್ ಆಗ್ರಹಿಸಿತ್ತು. 20 ಲಕ್ಷ ಕೋಟಿ ಪ್ಯಾಕೇಜ್‌ನಿಂದ ಯಾರಿಗೆ ಅನುಕೂಲವಾಯಿತು ಎಂದು ಕೇಳಿದರೂ ಮಾಹಿತಿ ಕೊಡಲಿಲ್ಲ. ರಾಜ್ಯ ಸರ್ಕಾರದ ಪ್ಯಾಕೇಜ್ ಬಗ್ಗೆಯೂ ಯಾವುದೇ ಮಾಹಿತಿ ಸಿಗಲಿಲ್ಲ ಎಂದು ಹೇಳಿದರು.

ಕೋವಿಡ್‌ನಿಂದ ಸತ್ತವರ ಆಡಿಟ್ ಮಾಡಿ ಎಂದು ಕೇಳಿದರೂ ಆ ಬಗ್ಗೆ ಸರ್ಕಾರ ಚಿಂತನೆ ಮಾಡಿಲ್ಲ. ಆಕ್ಸಿಜನ್ ಕೊರತೆ, ಹಾಸಿಗೆ ಸಿಗದೆ, ಚಿಕಿತ್ಸೆ ಸಿಗದೇ ಸತ್ತವರ ಸಂಖ್ಯೆ ಸರ್ಕಾರ ಕೊಟ್ಟಿರುವ ಅಂಕಿ-ಅಂಶಕ್ಕಿಂತ ಐದು ಪಟ್ಟು ಹೆಚ್ಚಾಗಿದೆ. ಡೆತ್ ಆಡಿಟ್ ಮಾಡುವುದಾಗಿ ಮುಖ್ಯಮಂತ್ರಿ ಹೇಳಿಕೆ ಕೊಟ್ಟರೂ, ಆ ಸಂಬಂಧ ಆದೇಶ ಹೊರಡಿಸಲಿಲ್ಲ ಎಂದು ಶಿವಕುಮಾರ್ ತಿಳಿಸಿದ್ದಾರೆ.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಯಾರು ಕೋವಿಡ್‌ನಿಂದ ನೊಂದಿದ್ದಾರೆ, ಬೆಂದಿದ್ದಾರೆ. ಜೀವ, ಜೀವನ ಕಳೆದುಕೊಂಡಿದ್ದಾರೆ.ಅವರನ್ನು ತಲುಪಲು ಪಕ್ಷ ಅಭಿಯಾನ ಹಮ್ಮಿಕೊಂಡಿದೆ. ಅಖಿಲ ಭಾರತ ಕಾಂಗ್ರೆಸ್ ಪಕ್ಷ ರಾಷ್ಟ್ರವ್ಯಾಪ್ತಿಯಲ್ಲಿ ಒಂದು ತಿಂಗಳ ಕಾಲ ಅಭಿಯಾನ ಹಮ್ಮಿಕೊಂಡು, ನಮಗೂ ಮಾರ್ಗದರ್ಶ ನೀಡಿದೆ ಎಂದವರು ಹೇಳಿದ್ದಾರೆ.

ಎಲ್ಲಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು, (2ನೇ ಪುಟಕ್ಕೆ)

## 'ಮುಂದಿನ ಮುಖ್ಯಮಂತ್ರಿ' ಬಹಿರಂಗ ಹೇಳಿಕೆ ಬೇಡ

ಬೆಂಗಳೂರು, ಜೂ.24 - ಮುಂದಿನ ಮುಖ್ಯಮಂತ್ರಿ ಕುರಿತು ಇನ್ನು ಮುಂದೆ ಬಹಿರಂಗ ಹೇಳಿಕೆ ನೀಡಬಾರದು ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಅವರು ಶಾಸಕರಲ್ಲಿ ಮನವಿ ಮಾಡಿದ್ದಾರೆ.



'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ' ಎಂದು ಶಾಸ ಕರು ಹೇಳಿಕೆ ನೀಡುತ್ತಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಶಾಸ ಕಾಂಗ ಪಕ್ಷದ ನಾಯಕರೂ ಆಗಿರುವ ಸಿದ್ದರಾಮಯ್ಯ ಅವರು ಶಾಸಕರಲ್ಲಿ ಈ ಮನವಿ ಮಾಡಿದ್ದಾರೆ.

ವಿಧಾನಸಭೆ ಚುನಾವಣೆಗೆ ಇನ್ನೂ ಎರಡು ವರ್ಷ ಬಾಕಿ ಇದೆ. ಹೀಗಾಗಿ ಮುಂದಿನ (2ನೇ ಪುಟಕ್ಕೆ)

## ಮಕ್ಕಳಲ್ಲಿ ಕಾಡುತ್ತಿರುವ ಮೆಸ್ಸಿ

ಬೆಂಗಳೂರು, ಜೂ. 24 -ವಯಸ್ಕರಲ್ಲಿ ಕೋವಿಡ್ ಚಿಕಿತ್ಸೆ ನಂತರ ಬ್ಲ್ಯಾಕ್ ಫಂಗಸ್ ಕಾಡುವಂತೆ ಮಕ್ಕಳಲ್ಲಿ ಮೆಸ್ಸಿ ಸಮಸ್ಯೆ ಕಾಣಿಸಿಕೊಳ್ಳುತ್ತಿರುವುದು ಆರೋಗ್ಯ ಇಲಾಖೆಗೆ ಹೊಸ ಸವಾಲು ತಂದೊಡ್ಡಿದೆ.

ಕೋವಿಡ್ ಸೋಂಕಿನಿಂದ ಚಿಕಿತ್ಸೆ ಪಡೆದು ಸುಧಾರಿಸಿಕೊಂಡ ಬಳಿಕ ಮಕ್ಕಳಲ್ಲಿ ಅತೀವ ಸುಸ್ತು, ಜ್ವರ, ಹೊಟ್ಟೆ ನೋವು, ಬಳಲಿಕೆಯಂತಹ ಸಮಸ್ಯೆಗಳಿದ್ದರೆ ನಿರ್ಲಕ್ಷಿಸದೇ ಮಕ್ಕಳ ತಜ್ಞ ವೈದ್ಯರ ಬಳಿ ಕರೆದುಕೊಂಡು ಹೋಗಬೇಕಿದೆ. ಅದರಲ್ಲೂ ಮಕ್ಕಳ ತಜ್ಞ ವೈದ್ಯರ ಬಳಿಯೇ ಕರೆದುಕೊಂಡು ಹೋಗುವುದು ಸೂಕ್ತವಾಗಿದೆ.

**ಕೊರೊನಾ ಚಿಕಿತ್ಸೆ ನಂತರ ಕಾಣಿಸಿಕೊಳ್ಳುತ್ತಿರುವ ಸಮಸ್ಯೆಯಿಂದ ಆರೋಗ್ಯ ಇಲಾಖೆಗೆ ಸವಾಲು**

ಕೊರೊನಾ ಚಿಕಿತ್ಸೆಯಿಂದ ಅಡ್ಡ ಪರಿಣಾಮವಾಗಿ ಮಕ್ಕಳಲ್ಲಿ ಕೆಲವೊಮ್ಮೆ ಮೆಸ್ಸಿ (ಮಲ್ಟಿಸಿಸ್ಟಮ್ ಇನ್ಪ್ಲಮೆಂಟ್ರಿ ಸಿಂಡ್ರೋಮ್) ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಈವರೆಗೂ ರಾಜ್ಯದಲ್ಲಿ ಸುಮಾರು 50ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಬಹು ಅಂಗಾಂಗ ಉರಿಯೂತದ ಈ ಆರೋಗ್ಯ ಸಮಸ್ಯೆ ಕೆಲವೊಮ್ಮೆ ಪ್ರಾಣಾಪಾಯ ಉಂಟು ಮಾಡುವ ಸಾಧ್ಯತೆಯೂ ಇದೆ.

ಕೊರೊನಾ ಗುಣಮುಖವಾದ ಎರಡು ಅಥವಾ ಮೂರನೇ ವಾರದ ಬಳಿಕ ಈ ಸಮಸ್ಯೆ ಕಾಣಿಸಿಕೊಳ್ಳುತ್ತಿರುವುದಾಗಿ ಆರೋಗ್ಯ ತಜ್ಞರು ಹೇಳುತ್ತಿದ್ದಾರೆ. ಕೊರೊನಾ ಪೀಡಿತ ಮಕ್ಕಳ ಚಿಕಿತ್ಸೆಯ ಬಗ್ಗೆ ರಾಜ್ಯದಿಂದಾಗಲೀ, (3ನೇ ಪುಟಕ್ಕೆ)

## ಲೋಕಸೇವಾ ಆಯೋಗದ ಸದಸ್ಯರಾಗಿ ಡಾ. ಶಾಂತ ಹೊಸಮನಿ ಪುರುಷೋತ್ತಮ್

ದಾವಣಗೆರೆ, ಜೂ.24- ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರನ್ನಾಗಿ ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ ರಕ್ತನಿಧಿ ವೈದ್ಯಾಧಿಕಾರಿ ಡಾ. ಶಾಂತ ಹೊಸಮನಿ ಅವರನ್ನು ನೇಮಕ ಮಾಡಿ, ರಾಜ್ಯಪಾಲ ವಜುಭಾಯಿ ವಾಲಾ ಅವರು ಮೊನ್ನೆ ಆದೇಶ ಹೊರಡಿಸಿದ್ದಾರೆ.

ಆಯೋಗದಲ್ಲಿ ಖಾಲಿ ಉಳಿದಿದ್ದ ಎರಡು ಸದಸ್ಯರ ಸ್ಥಾನಗಳಿಗೆ ಅಧಿಕಾರಿ ವಿಭಾಗದಿಂದ ಡಾ. ಶಾಂತ ಮತ್ತು ಅಧಿಕಾರೇತರ ವಿಭಾಗದಿಂದ ಬೆಂಗಳೂರಿನ ರಾಜಾಜಿನಗರದ ಡಾ. ಹೆಚ್. ಎಸ್. ನರೇಂದ್ರ ಅವರುಗಳು ನೇಮಕಗೊಂಡಿದ್ದಾರೆ.

ಈವರೆಗೂ ಸದಸ್ಯರಾಗಿದ್ದ ಶಿವಶಂಕರ್ ಸಾಹುಕಾರ್ ಅವರು ಕೆಪಿಎಸ್ ಇ ಅಧ್ಯಕ್ಷರಾಗಿದ್ದರೆ, ಎಸ್.ಹೆಚ್. ದುಗ್ಗಪ್ಪ ಅವರು ಕಳೆದ ಮಾಹೆಯಲ್ಲಿ ನಿವೃತ್ತರಾದ ಕಾರಣ, ಎರಡು ಸ್ಥಾನಗಳು ಖಾಲಿ ಉಳಿದಿದ್ದವು.



ಶಾಂತ ಹೊಸಮನಿ
ದಾವಣಗೆರೆ ಸೊಸೆ

**ಡಾ. ಶಾಂತ ಸಂಕ್ಷಿಪ್ತ ಪರಿಚಯ :** ಬೆಳಗಾವಿ ಜಿಲ್ಲೆಯವರಾದ ಡಾ. ಶಾಂತ ಹೊಸಮನಿ ಬಿ.ಎಸ್ಸಿ, ಎಂ.ಬಿ.ಬಿ.ಎಸ್., ಎಂ.ಡಿ. ಪೇಥಾಲಜಿ ಪದವೀಧರರಾಗಿದ್ದಾರೆ. ನಗರದ ನಿವೃತ್ತ ಹಿರಿಯ ಕೆಎಎಸ್ ಅಧಿಕಾರಿ ಬಿ.ಎಸ್. ಪುರುಷೋತ್ತಮ್ ಅವರ ಧರ್ಮಪತ್ನಿ.

ಸ್ಥಳೀಯ ಗಾಂಧಿನಗರದವರಾದ ಸ್ವಾತಂತ್ರ್ಯ ಹೋರಾಟಗಾರರೂ,ನಿವೃತ್ತಮುಖ್ಯೋಪಾಧ್ಯಾಯರೂ ಆಗಿದ್ದ ಭೈರಜ್ಜರ (3ನೇ ಪುಟಕ್ಕೆ)

## ಉನ್ನತ ಶಿಕ್ಷಣಕ್ಕೆ ಹಾಜರಾತಿ ಕಡ್ಡಾಯ : ಡಿಸಿಎಂ

ಬೆಂಗಳೂರು, ಜೂ.24 - ಉನ್ನತ ಶಿಕ್ಷಣದ ವಿದ್ಯಾರ್ಥಿಗಳು ಹಾಜರಾತಿ ಕಡ್ಡಾಯಗೊಳಿಸುವ ಬಗ್ಗೆ ಚರ್ಚೆ ನಡೆದಿದೆ ಎಂದು ಕೋವಿಡ್ ಕಾರ್ಯಪಡೆ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹದಿನೆಂಟು ವರ್ಷ ಮೇಲ್ಪಟ್ಟ ಎಲ್ಲ ಕಾಲೇಜು ವಿದ್ಯಾರ್ಥಿಗಳು, ಬೋಧಕ, ಸಹಾಯಕ ಸಿಬ್ಬಂದಿಗೆ ಆದ್ಯತೆ ಮೇಲೆ ಕೋವಿಡ್ ಲಸಿಕೆ ನೀಡಲಾಗುವುದು ಎಂದರು.

ಅಧಿಕಾರಿಗಳ ಸಮನ್ವಯದೊಂದಿಗೆ ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಲಸಿಕೆ ಅಭಿಯಾನಕ್ಕೆ ಕ್ರಮ ತೆಗೆದುಕೊಳ್ಳಲು ಈಗಾಗಲೇ ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಲಸಿಕೆ ಹಾಕಿದ ನಂತರ ಪದವಿ ತರಗತಿಗಳನ್ನು ಆರಂಭಿಸುವ ಬಗ್ಗೆ ಚರ್ಚಿಸಲಾಯಿತು. ಕಾಲೇಜು ಆರಂಭಕ್ಕೂ ಮೊದಲೇ (2ನೇ ಪುಟಕ್ಕೆ)

## ಎಲ್ಲಾ ಪೌರ ಕಾರ್ಮಿಕರ ಖಾಯಮಾತಿಗೆ ಶಿಫಾರಸ್ಸು

### ವಿಶ್ರಾಂತಿ ಕೋಣೆ ನಿರ್ಮಾಣ, ತಿಂಡಿಗಾಗಿ 50 ರೂ. ನೀಡಲು ಕ್ರಮಕ್ಕೆ ಸೂಚನೆ : ಶಿವಣ್ಣ

ದಾವಣಗೆರೆ, ಜೂ. 24 - ರಾಜ್ಯದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಆದೇಶದಂತೆ ಈಗಾಗಲೇ ಸಾವಿರಾರು ಪೌರ ಕಾರ್ಮಿಕರನ್ನು ಖಾಯಂಗೊಳಿಸಲಾಗಿದೆ. ಉಳಿದ ಪೌರ ಕಾರ್ಮಿಕರನ್ನೂ ಸಹ ಖಾಯಂಗೊಳಿಸಲು ಶಿಫಾರಸ್ಸು ಸಲ್ಲಿಸಲಾಗುವುದು ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಪ್ರಸಕ್ತ ಖಾಯಂ, ನೇರ ಪಾವತಿ, ಯು.ಜಿ.ಡಿ. ಹಾಗೂ ಆಟೋ ಟಿಪ್ಪರ್ ಎಂದು ಬೇರೆ ಬೇರೆ ನೇಮಕವಾದ ಪೌರ ಕಾರ್ಮಿಕರಿದ್ದಾರೆ. ಎಲ್ಲರನ್ನೂ ಒಂದೇ ರೀತಿ ಖಾಯಂ ಮಾಡಲು ಆಯೋಗದ ಮೂಲಕ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಶಿಫಾರಸ್ಸು ಸಲ್ಲಿಸಲಾಗುವುದು ಎಂದು ಹೇಳಿದರು.

ಬೆಂಗಳೂರು ಹೊರತು ಪಡಿಸಿ ಉಳಿದೆಡೆ ಗ್ರಾಮ ಪಂಚಾಯ್ತಿಗಳಿಂದ ಹಿಡಿದು ಪಾಲಿಕೆಯವರೆಗೆ 23 ಸಾವಿರ ಪೌರ ಕಾರ್ಮಿಕರಿದ್ದಾರೆ ಎಂಬ ಅಂದಾಜಿದೆ. ಆದರೆ, ಆಸ್ಪತ್ರೆ, ಅಪಾರ್ಟ್‌ಮೆಂಟ್, ಖಾಸಗಿ ತಾಣ ಸೇರಿದಂತೆ ಹಲವೆಡೆ ಇರುವ ಪೌರ ಕಾರ್ಮಿಕರ ಲೆಕ್ಕ ಸಿಕ್ಕಿಲ್ಲ. ಈ ಬಗ್ಗೆ ಸಮೀಕ್ಷೆ ಮಾಡಿಸುತ್ತೇವೆ ಎಂದು ಹೇಳಿದರು.

ಪೌರ ಕಾರ್ಮಿಕರಲ್ಲಿ ಹೆಚ್ಚಿನವರು ಮಹಿಳೆಯರಿದ್ದಾರೆ. ಇವರಿಗೆ ವಿಶ್ರಾಂತಿ ಕೋಣೆ ಇಲ್ಲದೇ ಸಮಸ್ಯೆಯಾಗುತ್ತಿದೆ. ರಾಜ್ಯದೆಲ್ಲೆಡೆ ಇಂತಹ ಕೋಣೆ ಸ್ಥಾಪಿಸಲಾಗುವುದು. ದಾವಣಗೆರೆ ನಗರ ಪಾಲಿಕೆ ಬಜೆಟ್‌ನಲ್ಲಿ ಹಣ ನಿಗದಿ ಪಡಿಸಲಾಗಿದೆ ಎಂದು ಶಿವಣ್ಣ ತಿಳಿಸಿದರು.

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಸಂಪೂರ್ಣ ನಿಷೇಧ ಆಗಬೇಕಿದೆ. ಇದಕ್ಕಾಗಿ ಆಯೋಗ ಹಾಗೂ ಸರ್ಕಾರ ಬದ್ಧವಾಗಿದೆ (3ನೇ ಪುಟಕ್ಕೆ)



**ಪೌರ ಕಾರ್ಮಿಕರ ಸರಾಸರಿ ಆಯಸ್ಸು 45 ವರ್ಷ**

ಪೌರ ಕಾರ್ಮಿಕರು ಕಸ ವಿಲೇವಾರಿ ಮಾಡುವಾಗ ಎದುರಿಸುವ ಆರೋಗ್ಯ ಸಮಸ್ಯೆಯಿಂದಾಗಿ ಅವರ ಸರಾಸರಿ ಆಯಸ್ಸು 45 ವರ್ಷವಿದೆ ಎಂದು ನ್ಯಾಷನಲ್ ಸ್ಕೂಲ್ ಆಫ್ ಇಂಡಿಯಾ ವರದಿ ಮಾಡಿದೆ. ಪೌರ ಕಾರ್ಮಿಕರ ಪೈಕಿ ಶೇ.4ರಷ್ಟು ಜನರಿಗೆ ಮಾತ್ರ ಇದುವರೆಗೂ ಸೌಲಭ್ಯಗಳು ತಲುಪಿವೆ ಎಂದು ಇದೇ ವರದಿ ತಿಳಿಸಿದೆ ಎಂದು ಹೇಳಿರುವ ಎಂ. ಶಿವಣ್ಣ, ಈ ಪರಿಸ್ಥಿತಿ ಸುಧಾರಿಸಬೇಕಿದೆ ಎಂದಿದ್ದಾರೆ.

# ಬನ್ನಿ, ಕೈ ಜೋಡಿಸಿ, ತೊನ್ನು ರೋಗಕ್ಕೆ ಅಂಟಿರುವ ಕಳಂಕ ತೊಲಗಿಸಿ

ಈ ಹಿಂದೆ ತೊನ್ನು ರೋಗವನ್ನು ಶ್ವೇತ ಕುಷ್ಠ ಎಂದು ಬಣ್ಣಿಸಲಾಗಿದೆ. ತೊನ್ನು ರೋಗದಿಂದ ಬಳಲುತ್ತಿರುವವರು ಸಾಮಾಜಿಕವಾಗಿ ಹೆಚ್ಚು ಮುಜುಗರಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಅನಕ್ಷರತೆ, ಅಪನಂಬಿಕೆ ಮತ್ತು ಕಾಯಿಲೆ ಬಗ್ಗೆ ಸಾಮಾನ್ಯ ಜ್ಞಾನದ ಕೊರತೆಯಿಂದಾಗಿ ರೋಗದ ಬಗ್ಗೆ ಅನಗತ್ಯ ಗೊಂದಲವನ್ನು ಜನರಲ್ಲಿ ಉಂಟುಮಾಡಲಾಗುತ್ತದೆ. ಇದನ್ನು ಮೆಟ್ಟಿ ನಿಲ್ಲಲು ಪ್ರತಿ ವರ್ಷ ಜೂನ್ 25ರಂದು "ವಿಶ್ವ ತೊನ್ನು ದಿನ" ಎಂದು ಆಚರಿಸಿ, ಜನಸಾಮಾನ್ಯರಲ್ಲಿ ಈ ತೊನ್ನು ರೋಗದ ಬಗ್ಗೆ ಅರಿವು ಮೂಡಿಸಿ, ರೋಗದ ಬಗ್ಗೆ ಇರುವ ಮೂಢನಂಭಿಕೆಗಳನ್ನು ದೂರ ಮಾಡುವ ಒಂದು ಸಣ್ಣ ಪ್ರಯತ್ನ.

ಚರ್ಮಕ್ಕೆ ಬಣ್ಣ ನೀಡುವ ಮೆಲನಿನ್ ಉತ್ಪಾದಿಸುವ ಮೆಲನೊಸೈಟ್ ಕೋಶಗಳ ನಷ್ಟದಿಂದಾಗಿ ಹಾಲಿನ ಬಿಳಿಬಣ್ಣದ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ಇದಕ್ಕೂ ಬೇರೆ ಬೇರೆ ಕಾರಣಗಳಿವೆ ಅದರಲ್ಲಿ ಪ್ರಮುಖವಾಗಿ ಆತ್ಮಾಘಾತಿ ಪ್ರಕ್ರಿಯೆ ಅಥವಾ ಪ್ರತಿರೋಧಕ ಶಕ್ತಿ, ಕೆಲವು ಜನರಲ್ಲಿ ಮಾತ್ರ ಅನುವಂಶೀಯತೆ ಕೂಡ ಒಂದು ಕಾರಣ. ಬಿಡುವಿಲ್ಲದ ಜೀವನಶೈಲಿ, ರೋಗದ ಬಗ್ಗೆ ಜಾಸ್ತಿ ಚಿಂತೆ ಮಾಡುವುದು, ಪದೇ ಪದೇ ತ್ವಚೆಗೆ ಗಾಯ ಮಾಡಿಕೊಳ್ಳುವುದಾಗಲೀ, ಕೆಲವು ರಾಸಾಯನಿಕಗಳ ಸಂಪರ್ಕಕ್ಕೆ ಬಂದ ಸಂದರ್ಭಗಳಲ್ಲಿ ಈ ಕಾಯಿಲೆ ವರ್ಧಿತವಾಗುವ ಸಾಧ್ಯತೆ ಇರುತ್ತದೆ.

ತೊನ್ನು ಯಾವುದೇ ವಯಸ್ಸಿನಲ್ಲಿ ಆರಂಭವಾಗಬಹುದು, ಮುಖ್ಯವಾಗಿ ಇದು 20 ವರ್ಷಕ್ಕಿಂತ ಕೆಳಗಿನವರಲ್ಲಿ ಪ್ರಾಥಮಿಕ ಚಿಹ್ನೆ ಕಾಣಿಸಿ ಕೊಳ್ಳುತ್ತದೆ. ವಿಶ್ವದ 1 ಪ್ರತಿಶತ ಜನರಲ್ಲಿ ಈ ಕಾಯಿಲೆ ಇದೆ. ದೇಹದ ಬಹು ಭಾಗಗಳಲ್ಲಿ ಹಾಲಿನ ಬಣ್ಣದ ಬಿಳಿ ಮಚ್ಚೆಗಳು ಇದ್ದರೆ ಅದಕ್ಕೆ ಸಾರ್ವತ್ರಿಕ ತೊನ್ನು ರೋಗ ಎನ್ನುವರು. ಅದೇ ರೀತಿ ಒಂದೇ ಸ್ಥಳದಲ್ಲಿ ಹರಡಿದ ಬಿಳಿ ಮಚ್ಚೆ ಕಂಡು ಬಂದರೆ ಫೋಕಲ್ ವಿಟಿಲ್‌ಗೋ ಅನ್ನುವರು.

ಮುಖ, ಕೈಗಳು ಅಥವಾ ಪಾದದಲ್ಲಿ ಮಾತ್ರ ಬಿಳಿ ಹಾಲಿನ ಬಣ್ಣದ ಮಚ್ಚೆಗಳು ಕಂಡುಬಂದರೆ ಆಕ್ರೋಫೆಸಿಯಲ್ ವಿಟಿಲ್‌ಗೋ ಅನ್ನುವರು. ತುಟಿಗಳು ಹಾಗೂ ಬೆರಳುಗಳ ತುದಿಯಲ್ಲಿ ಮಾತ್ರ ಕಂಡು ಬಂದಲ್ಲಿ ಲಿಪ್-ಟಿಪ್ ವೈರಟಿ ಮತ್ತು ಬೆನ್ನು ಹುರಿಯಿಂದ ಬೆನ್ನಿನ ಆಳದೊಂದಿಗೆ ಇರುವ ಚರ್ಮದ ಪ್ರದೇಶದ ಮೇಲೆ ಕಂಡುಬಂದಲ್ಲಿ ಸೆಗ್‌ಮೆಂಟಲ್ ವಿಟಿಲ್‌ಗೋ ಎಂದು ಕರೆಯವರು.ಕೆಲವು ಜನರಲ್ಲಿ ಮಚ್ಚೆಗಳು ಮೊದಲು ಚಿಕ್ಕದಾಗಿದ್ದು ರೋಗ ಹೆಚ್ಚಾದಂತೆ




ಇಂದು 'ವಿಶ್ವ ತೊನ್ನು ದಿನ'

ಇವುಗಳ ಆಕಾರ ಮತ್ತು ಸಂಖ್ಯೆಯಲ್ಲಿ ವೃದ್ಧಿಯಾಗುತ್ತದೆ.

ಚಿಕಿತ್ಸೆಯಿಂದ ತ್ವಚೆಯ ಬಣ್ಣವನ್ನು ಕಾಪಾಡಿಕೊಳ್ಳಲು ಮತ್ತು ಮತ್ತಷ್ಟು ಹರಡುವಿಕೆಯನ್ನು ತಡೆಗಟ್ಟಬಹುದು. ಈ ರೋಗಕ್ಕೆ ಹಲವು ರೀತಿಯ ಚಿಕಿತ್ಸೆಗಳಿದ್ದು ಅವುಗಳಲ್ಲಿ ಪ್ರಮುಖವಾಗಿ ಸ್ಟಿರಾಯ್ಡ್‌ಗಳು, ಟ್ಯಾಕ್ರೋಲಿಮಸ್ ಮೂಲಮುಗಳು ತೊನ್ನು ಚಿಕಿತ್ಸೆಗೆ ಬಳಸಲಾಗುತ್ತದೆ. ವಿವಿಧ ರೀತಿಯ ನೇರಳಾತೀತ ಕಿರಣಗಳ ಬೆಳಕಿನ ಚಿಕಿತ್ಸೆಯನ್ನು ಕೂಡ ಕೊಡಲಾಗುತ್ತದೆ ಅವುಗಳಲ್ಲಿ ಪ್ರಮುಖವಾಗಿ UVA, NBU-VB ,PUVA ಮತ್ತು PUVAsol ಚಿಕಿತ್ಸೆಯಲ್ಲಿ ರೋಗಿಗಳಿಗೆ ಸೋರಾಲೆನ್ಸ್ ಮಾತ್ರೆಗಳನ್ನು ತೆಗೆದುಕೊಂಡು 2 ಗಂಟೆಗಳ ಅನಂತರ ಚರ್ಮವನ್ನು ಸೂರ್ಯನ ಬೆಳಕಿಗೆ 3 ರಿಂದ 5 ನಿಮಿಷಗಳ ಕಾಲ ಹಾಲಿನ ಬಣ್ಣದ ಬಿಳಿ ಮಚ್ಚೆಗಳನ್ನು ಮೈ ಯೊಡ್ಡಬೇಕು. ಕಣ್ಣುಗಳನ್ನು ರಕ್ಷಿಸಿಕೊಂಡು ವಾರದಲ್ಲಿ ಎರಡು ಅಥವಾ ಮೂರು ಬಾರಿ ಈ ರೀತಿಯ ಚಿಕಿತ್ಸೆಯನ್ನು ಪಡೆಯಬೇಕು . ತೊನ್ನು ರೋಗಕ್ಕೆ ವಿವಿಧ ರೀತಿಯ ಶಸ್ತ್ರಚಿಕಿತ್ಸೆಗಳಿದ್ದು ಉದಾಹರಣೆಗೆ ಸೆಲ್ ಗ್ರಾಫ್ಟಿಂಗ್, ಮೆಲನೋಸೈಟ್ ಕಲ್ಚರ್, ಬ್ಲಿಸ್ಟರೋಗ್ರಫಿ ಮತ್ತು ಪಂಚ್ ಗ್ರಾಫ್ಟಿಂಗ್ ಮುಂತಾದವುಗಳನ್ನು ಮಾಡಬಹುದು. ಶಸ್ತ್ರಚಿಕಿತ್ಸೆ ಮಾಡಲು ಬಿಳಿ ಬಣ್ಣದ ಮಚ್ಚೆಗಳು ಬೇರೆ ಜಾಗಕ್ಕೆ ಹರಡುವುದಾಗಲೀ ಮತ್ತು ಆಕಾರ ವೃದ್ಧಿಯಾಗುವದಾಗಲೀ ಆಗಬಾರದು. ಇತ್ತೀಚಿನ ದಿನಗಳಲ್ಲಿ ಎಕ್ಸೈಮರ್ (ex-cimer) ಲೇಸರ್ ಬೇಗ ತ್ವಚೆಯ ಬಣ್ಣ ಮರುಕಳಿಸಲು ಸಹಾಯ ಮಾಡುತ್ತದೆ.

ರೋಗಿಗಳಿಗೆ ಸ್ವಯಂ ಉಪಚಾರದ ಸಲಹೆಗಳೆಂದರೆ ಸಕಾರಾತ್ಮಕ ಭಾವನೆ ಹೊಂದಲು ದಿನನಿತ್ಯ ಯೋಗಾಸನ ಧ್ಯಾನ ಮಾಡಬೇಕು. ಈ ರೋಗಕ್ಕೆ ಸೂಕ್ತವಾದ ಆಹಾರವೆಂದರೆ ಮೀನು, ಬಾಳೆಹಣ್ಣು, ಸೋಯಾಬಿನ್, ಶೇಂಗಾ, ಕೆಂಪು ದ್ರಾಕ್ಷಿ

ಡಾ|| ಸೂಗಾರೆಡ್ಡಿ,
ಚರ್ಮರೋಗ ವಿಭಾಗದ ಮುಖ್ಯಸ್ಥರು,
ಜೆಜೆಎಂ ಮೆಡಿಕಲ್ ಕಾಲೇಜು,
ದಾವಣಗೆರೆ.

ಡಾ|| ಪರಮೇಶ್ವರ
ಚರ್ಮರೋಗ ಸ್ನಾತಕೋತ್ತರ
ವಿದ್ಯಾರ್ಥಿ, ಜೆಜೆಎಂ ಮೆಡಿಕಲ್
ಕಾಲೇಜು, ಮೊ: 63635 76220

ಈರುಳ್ಳಿ ಮತ್ತು ಮಶ್ರೂಮ್ ಆಹಾರ ಪದಾರ್ಥಗಳು ಆ್ಯಂಟಿ ಎಕ್ಸಿಡೆಂಟ್ ಮತ್ತು ರೋಗವರ್ಧಿತ ಶಕ್ತಿ ಇರುತ್ತದೆ. ಗಡಿಬಿಡಿಯ ಜೀವನ ಶೈಲಿ ಬದಲಾಯಿಸ ಬೇಕು. ಗಾಯದ ಜಾಗದಲ್ಲಿ ಹೊಸ ಮಚ್ಚೆಗಳು ಕಾಣಿಸಿಕೊಳ್ಳುವುದರಿಂದ ದೇಹದ ಮೇಲೆ ಗಾಯಗಳಾಗದಂತೆ ನೋಡಿಕೊಳ್ಳಬೇಕು. ಟ್ಯಾಟೂ ಹಾಕಿಸಿಕೊಳ್ಳಬೇಡಿ ಮತ್ತು ಮದ್ಯಪಾನ, ಧೂಮಪಾನ ಮಾಡಬೇಡಿ .

ತೊನ್ನು ರೋಗ ರೋಗಿಯ ಸ್ಪರ್ಶದಿಂದ ಹರಡುತ್ತದೆ ಎನ್ನುವುದು ಮೂಢನಂಬಿಕೆಯ ಪರಮಾವಧಿ. ಈ ರೋಗ ಸಾಂಕ್ರಾಮಿಕ ರೋಗವಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಸ್ಪರ್ಶದಿಂದ ಹರಡುವುದೇ ಇಲ್ಲ. ಈ ಕಾಯಿಲೆಯು ಹೋದ ಜನ್ಮದ ಕರ್ಮ (3ನೇ ಪುಟಕ್ಕೆ)

## ಶಿಕ್ಷಣ ; ಹಾಜರಾತಿ ಕಡ್ಡಾಯ

(1ನೇ ಪುಟದಿಂದ) ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಹಾಗೂ ಸಹಾಯಕ ಸಿಬ್ಬಂದಿಗೆ ಲಸಿಕೆ ನೀಡಲು ನಿರ್ಣಯ ಕೈಗೊಳ್ಳಲಾಗಿದೆ ಎಂದಿರುವ ಅವರು ಆಯಾ ಕಾಲೇಜುಗಳಲ್ಲಿಯೇ ಲಸಿಕೆ ಅಭಿಯಾನ ಕೈಗೊಳ್ಳಲಾಗುವುದು ಎಂದಿದ್ದಾರೆ. ಇವರೆಲ್ಲರೂ ಲಸಿಕೆ ಪಡೆಯಲು ಆಯಾ ಸಂಸ್ಥೆಗಳಲ್ಲಿ ನೀಡಲಾಗುವ ದೃಢೀಕರಣ ಪತ್ರ ಹಾಜರುಪಡಿಸಬೇಕು. ಪ್ರತಿ ಕಾಲೇಜಿನ ಮುಖ್ಯಸ್ಥರು ಹಾಗೂ ಇನ್ನೊಬ್ಬ ಅಧಿಕಾರಿಯನ್ನು ನೋಡೆಲ್ ಅಧಿಕಾರಿಯನ್ನಾಗಿ ನಿಯೋಜನೆ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ.

ಈ ಲಸಿಕೀಕರಣಕ್ಕೆ ಪ್ರತ್ಯೇಕ ಮಾರ್ಗಸೂಚಿ (ಎಸ್‌ಒಪಿ) ಇರುತ್ತದೆ. ಅದರಂತೆಯೇ ಲಸಿಕೀಕರಣ ನಡೆಸಲಾಗುವುದು. ಅಲ್ಲದೆ, ನೋಡೆಲ್ ಅಧಿಕಾರಿಗಳು ಆಯಾ ಶಿಕ್ಷಣ ಸಂಸ್ಥೆಯಲ್ಲಿನ ಎಲ್ಲ ಅರ್ಹರಿಗೂ ತಪ್ಪದೇ ಲಸಿಕೆ ಕೊಡಿಸಬೇಕು ಹಾಗೂ ಅದರ ಬಗ್ಗೆ ಖಾತರಿ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ ಎಂದು ಡಿಸಿಎಂ ಮಾಹಿತಿ ನೀಡಿದ್ದಾರೆ.

ಈ ವಿಭಾಗದ ಎಲ್ಲರಿಗೂ ಮೊದಲ ಡೋಸ್ ಲಸಿಕೆ ಹಾಕಿದ ನಂತರ ನೇರ ತರಗತಿಗಳನ್ನು ಆರಂಭ ಮಾಡುವ ಬಗ್ಗೆ ನಿರ್ಧರಿಸಲಾಗುವುದು. ಲಸಿಕೆ ಕೊಡಲಿ, ಬಿಡಲಿ ಕಲಿಕೆ ನಿಲ್ಲುವುದಿಲ್ಲ. ಡಿಜಿಟಲ್ ವೇದಿಕೆ ಯಲ್ಲಿ ಕಲಿಕೆ ಮುಂದುವರೆದಿದೆ. ಲಸಿಕೆ ಪಡೆದ ಮೇಲೆ ವಿದ್ಯಾರ್ಥಿಗಳು ಭೌತಿಕ ತರಗತಿಗಳಿಗೆ ಹಾಜರಾಗಬಹುದು ಅಥವಾ ತಾವಿದ್ದಲ್ಲಿಯೇ ಆನ್‌ಲೈನ್ ಕ್ಲಾಸ್‌ಗೆ ಹಾಜರಾಗಬಹುದು. ಹಾಜರಾತಿ ಮಾತ್ರ ಕಡ್ಡಾಯ ಎಂದು ಡಾ.ಅಶ್ವತ್ಥನಾರಾಯಣ ಹೇಳಿದರು.

ಮೊದಲ ಡೋಸ್ ಪಡೆದ ನಂತರ ದೇಹದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸಲಾರಂಭಿಸುತ್ತದೆ. ಒಂದು ವೇಳೆ ನೇರ ತರಗತಿಗೆ ಹಾಜರಾದ ನಂತರವೂ ಸೋಂಕು ಬಂದರೆ ಜೀವಕ್ಕೆ ಹಾನಿ ಆಗುವುದಿಲ್ಲ. ಹೀಗಾಗಿ ಎಲ್ಲ ವಿದ್ಯಾರ್ಥಿ, ಸಿಬ್ಬಂದಿ ಲಸಿಕೆ ಪಡೆಯಬೇಕು ಎಂದು ಅವರು ಕೋರಿದರು.

## ಮಲೇಬೆನ್ನೂರಿನಲ್ಲಿ ಮುಖರ್ಜಿ ಬಲಿದಾನ ದಿವಸ್ ಆಚರಣೆ



ಮಲೇಬೆನ್ನೂರು, ಜೂ.24- ಪಟ್ಟಣದಲ್ಲಿ ಬುಧವಾರ ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಘಟಕದ ವತಿಯಿಂದ ಭಾರತದ ಅಖಂಡತೆಗೆ ಶ್ರಮಿಸಿದ ಧೀಮಂತ ನಾಯಕ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಬಲಿದಾನ ದಿವಸದ ಈ ಸಂದರ್ಭದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಸಸಿ ನಡೆಲಾಯಿತು. ನಂತರ ಅವರ ನ್ಯಾಯ, ನಿಷ್ಠೆ, ದೇಶಭಕ್ತಿಯನ್ನು ಸ್ಮರಿಸಲಾಯಿತು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ, ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಪ್ರಧಾನ ಕಾರ್ಯದರ್ಶಿ ಆದಾಪುರ ವೀರೇಶ್, ಪುರಸಭೆ ಮಾಜಿ ಸದಸ್ಯರಾದ ಬಿ.ಸುರೇಶ್, ಗೌಡ್ರ ಮಂಜಣ್ಣ, ಪಿ.ಆರ್.ರಾಜು, ಎ.ಕೆ.ಲೋಕೇಶ್, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಪಾನಿಪುರಿ ರಂಗನಾಥ್, ಬಿ.ಮಂಜುನಾಥ್, ಭೋವಿ ಹನುಮಂತಪ್ಪ, ಬಿಜೆಪಿ ಮುಖಂಡರಾದ ಐರಣಿ ಮಹೇಶ್ವರಪ್ಪ, ಉಡೇದರ ಸಿದ್ದೇಶ್, ಮುತ್ತಣ್ಣ, ಸತೀಶ್ ಆಚಾರ್, ಪಾನಿಪುರಿ ಸಿದ್ದೇಶ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಬಸಾಪುರದಲ್ಲಿ ಇಂದು ಲಸಿಕೆ ಅಭಿಯಾನ

ಶಾಮನೂರು ಕುಟುಂಬ ನೀಡಿರುವ ಉಚಿತ ಕೋವಿಡ್ -19 ಲಸಿಕೆ ಕಾರ್ಯಕ್ರಮವು ಬಸಾಪುರದಲ್ಲಿ ಇಂದು ಬೆಳಿಗ್ಗೆ 10 ರಿಂದ ನಡೆಯಲಿದೆ. ಅಭಿಯಾನಕ್ಕೆ ಎಸ್ಸೆಸ್ ಚಾಲನೆ ನೀಡಲಿದ್ದಾರೆ ಎಂದು ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಕಾರ್ಯದರ್ಶಿ ಕೆ.ಎಲ್. ಹರೀಶ್ ಬಸಾಪುರ ತಿಳಿಸಿದ್ದಾರೆ.

## ಆತ್ಮವಿಶ್ವಾಸ ಹೆಚ್ಚಿಸಲು ಯೋಗ ಸಹಕಾರಿ

ಹರಪನಹಳ್ಳಿ, ಜೂ.24- ಕೊರೊನಾ ಭಯ ನಿವಾರಣೆ ಹಾಗೂ ವ್ಯಕ್ತಿಯಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಲು ಯೋಗ, ಪ್ರಾಣಾಯಾಮ. ಕೊರೊನಾ ರೋಗಿಗಳು ಶೀಘ್ರ ಗುಣಮುಖರಾಗಲು ಯೋಗ ಸಹಕಾರಿಯಾಗಿದೆ ಎಂದು ಪತಂಜಲಿ ಯೋಗ ಸಮಿತಿ ಅಧ್ಯಕ್ಷ ಹೆಚ್. ಮಲ್ಲಿಕಾರ್ಜುನ ಅಭಿಪ್ರಾಯಪಟ್ಟರು.



ಹರಪನಹಳ್ಳಿ

ಪಟ್ಟಣದ ನೃತ್ಯ ತರಬೇತಿ ಶಾಲೆಯಲ್ಲಿ ಪತಂಜಲಿ ಯೋಗ ಸಮಿತಿ ಹಾಗೂ ಪಟ್ಟಣದ ತರಳಬಾಳು ವಿದ್ಯಾಸಂಸ್ಥೆಯ ಆವರಣದಲ್ಲಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಕೊರೊನಾ ವಿರುದ್ಧ ಹೋರಾಡಲು ಯೋಗದಿಂದ ಬಲ ಸಿಕ್ಕಿದೆ. ಮಾನಸಿಕ ಒತ್ತಡದಿಂದ ಮುಕ್ತಿಹೊಂದಿ, ಕೋಪ ಶಮನಗೊಳ್ಳಲು ಹಾಗೂ ಎಲ್ಲಾ ನಾಡಿಗಳು ಪರಿಶುದ್ಧಗೊಂಡು ದೇಹ ಬಲಿಷ್ಠ, ಕಾಂತಿಯುತವಾಗಲು, ಅನೇಕ ಕಾಯಿಲೆಗಳಿಂದ ಮುಕ್ತಿ ಹೊಂದಲು ಯೋಗವೇ ಮದ್ದು. ನಮ್ಮ ಆರೋಗ್ಯಕ್ಕಾಗಿ ಒಂದು ತಾಸು ಯೋಗ, ಧ್ಯಾನ, ಪ್ರಾಣಾಯಾಮವನ್ನು ದಿನವೂ ತಪ್ಪದೇ ಮಾಡಿದರೆ ಯಾವ ರೋಗವೂ ಹತ್ತಿರ ಸುಳಿಯುವುದಿಲ್ಲ ಎಂದು ಅವರು ಪ್ರತಿಪಾದಿಸಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿಯ ಸಂಚಾಲಕರಾದ ಬ್ರಹ್ಮಾಕುಮಾರಿ ಸುಮಂಗಲ ಮಾತನಾಡಿ, ಯೋಗದಲ್ಲಿ ಅನೇಕ ವಿಧಾನಗಳಿವೆ, ರಾಜಯೋಗ ಭಾರತದ ಪ್ರಾಚೀನ ಯೋಗ. ಎಲ್ಲಾ ಯೋಗಗಳಿಗೆ ರಾಜಯೋಗವೇ ಅಡಿಪಾಯವಾಗಿದೆ ಎಂದರು.

ತರಳಬಾಳು ಪ್ರಾಥಮಿಕ ಶಾಲೆಯ ಕಾರ್ಯದರ್ಶಿ ಪುಷ್ಪ ಜಗದೀಶ್ ಯೋಗ ಇತಿಹಾಸವನ್ನು ತಿಳಿಸಿಕೊಟ್ಟರು. ಯೋಗ ತರಬೇತಿಯಲ್ಲಿ ತರಳಬಾಳು ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ನಂಜಪ್ಪ, ಸ್ವಪ್ನ ಮಲ್ಲಿಕಾರ್ಜುನ್, ಚನ್ನವೀರ ಸ್ವಾಮಿ, ಹರ್ಷಿತ, ಶೃಂಗಶ್ರೀ, ಮಂಜುನಾಥ, ಕೆ. ಶಿವನಾಗ, ಹೃತಿಕ್, ತಿಲಕ್ ಇನ್ನಿತರರು ಭಾಗವಹಿಸಿದ್ದರು.

## ಹೇಳಿಕೆ ಬೇಡ

(1ನೇ ಪುಟದಿಂದ) ಮುಖ್ಯ ಮಂತ್ರಿ ಎಂದು ಈಗಲೇ ಹೇಳಿಕೆ ನೀಡಬಾರದು. ಸಿಎಂ ಯಾರಾಗಬೇಕು ಎಂಬುದನ್ನು ಚುನಾವಣೆ ಬಳಿಕ ಶಾಸಕರ ಅಭಿಪ್ರಾಯ ಪಡೆದು ಹೈಕಮಾಂಡ್ ನಿರ್ಧರಿಸುತ್ತದೆ. ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಸಿದ್ದರಾಮಯ್ಯ ಅವರು ಹೇಳಿದ್ದಾರೆ.

## ಆತ್ಮಸ್ಥೈರ್ಯ ತುಂಬಲು ಅಭಿಯಾನ


(1ನೇ ಪುಟದಿಂದ) ವಿಧಾನಸಭೆ ಚುನಾವಣೆಯಲ್ಲಿ ಗೆದ್ದವರು, ಸೋತವರ ಜತೆ ಈ ಮಾಹಿತಿ ಹಂಚಿಕೊಳ್ಳುತ್ತೇವೆ. ಕೋವಿಡ್‌ನಿಂದ ಪ್ರಾಣ, ಉದ್ಯೋಗ ಕಳೆದುಕೊಂಡು, ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವವರ ಬಗ್ಗೆ ಮಾಹಿತಿ ಕಲೆಹಾಕಿ, ಅವರಿಗೆ ಮಾನಸಿಕವಾಗಿ ಶಕ್ತಿ ತುಂಬಲು ಈ ಕಾರ್ಯಕ್ರಮ ರೂಪಿಸಲಾಗಿದೆ.

ಪಂಚಾಯಿತಿಯಿಂದ ಪಾರ್ಲಿಮೆಂಟ್ ಕ್ಷೇತ್ರದವರೆಗೂ, ಬ್ಲಾಕ್ ಮಟ್ಟದಿಂದ ಟೌನ್‌ಗಳವರೆಗೆ ಕೋವಿಡ್ ವಾರಿಯರ್‌ಗಳನ್ನು ನೇಮಕ ಮಾಡಿ, ಸ್ಥಳೀಯ ನಾಯಕರ ಮುಂದಾಳತ್ವದಲ್ಲಿ ತಂಡ ರಚಿಸಿ ಕನಿಷ್ಠ 200 ಕುಟುಂಬಗಳನ್ನು ಭೇಟಿ ಮಾಡಿ, ಅವರಿಗೆ ಸಾಂತ್ವನ ಹೇಳುವ ಗುರಿ ಹೊಂದಲಾಗಿದೆ. ಕೋವಿಡ್ ನಿಂದ ಆ ಕುಟುಂಬ ಏನೆಲ್ಲಾ ಸಂಕಷ್ಟ ಅನುಭವಿಸಿದೆ. ನಾವು ಅವರಿಗೆ ಹೇಗೆ ನೆರವಾಗಬಹುದು, ಸರ್ಕಾರದ ಮೇಲೆ ಒತ್ತಡ ಹಾಕಿ ಏನೆಲ್ಲ ನೆರವು ಕೊಡಿಸಬಹುದು ಎಂಬ ಮಾಹಿತಿ ಪಡೆಯಲಾಗುವುದು ಎಂದವರು ಹೇಳಿದ್ದಾರೆ.

ತಮ್ಮ ಮನೆಯಲ್ಲಿ ಯಾರಾದರೂ ಸೋಂಕಿತರಾಗಿದ್ದಾರಾ? ಸೋಂಕಿನಿಂದ ಸತ್ತಿದ್ದಾರಾ? ಸತ್ತಿದ್ದರೆ ಅವರ ಹೆಸರು ಹಾಗೂ ವಯಸ್ಸು ಏನು? ಮೃತಪಟ್ಟವರು ಮನೆಯಲ್ಲಿ ದುಡಿಯುವ ವ್ಯಕ್ತಿಯಾಗಿದ್ದರಾ? ಕುಟುಂಬದಲ್ಲಿ ಕೋವಿಡ್/ ಲಾಕ್‌ಡೌನ್‌ನಿಂದ ಯಾರಾದರೂ ಉದ್ಯೋಗ ಕಳೆದು ಕೊಂಡಿದ್ದಾರಾ? ಉದ್ಯೋಗ ಕಳೆದುಕೊಂಡಿದ್ದರೆ ಅವರ ಹೆಸರು ಹಾಗೂ ವಯಸ್ಸು? ಆ ಕುಟುಂಬಕ್ಕೆ ಅಗತ್ಯವಾಗಿರುವ ನೆರವು (ದಿನಸಿ, ಉದ್ಯೋಗ, ಶಿಕ್ಷಣ, ಆರ್ಥಿಕ ನೆರವು) ಏನು? ಎಂಬ ಮಾಹಿತಿ ಕಲೆಹಾಕಿ ಅದನ್ನು ಕೆಪಿಸಿಸಿಗೆ ಕಳುಹಿಸಿಕೊಡಬೇಕು. ನಂತರ ಅದನ್ನು ಎಐಸಿಸಿಗೆ ರವಾನಿಸಲಾಗುವುದು.

ಸರ್ಕಾರದ ಪರಿಹಾರ ಪಡೆಯಲು ನೋಂದಣಿ ಮಾಡಿಸಿಕೊಳ್ಳುವ ದಿನಾಂಕವನ್ನು ಸರ್ಕಾರ 30ನೇ ತಾರೀಖಿನವರೆಗೆ ವಿಸ್ತರಿಸಿದ್ದು, ಹೀಗಾಗಿ ನಮ್ಮ ಕಾರ್ಯಕರ್ತರು ಎಲ್ಲ ವರ್ಗದವರ ಮಾಹಿತಿ ಪಡೆದು, ಅವರು ಪರಿಹಾರ ಪಡೆಯಲು ನೋಂದಣಿ ಮಾಡಿಸಬೇಕು ಎಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ ಎಂದವರು ತಿಳಿಸಿದ್ದಾರೆ.

### ಟಿ. ಹುಚ್ಚಪ್ಪನವರು ನಿಧನ



ಬಸವ-ಬುದ್ಧ-ಭೀಮ ನಗರ, ದಾವಣಗೆರೆ ವಾಸಿಯಾದ ಟಿ. ಹುಚ್ಚಪ್ಪನವರು (46) ಇವರು ದಿನಾಂಕ : 24.6.2021 ರ ಗುರುವಾರ ಮಧ್ಯಾಹ್ನ 1.00 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ, ಓರ್ವ ಪುತ್ರಿ, ಇಬ್ಬರು ಗಂಡು ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ 24.06.2021ರ ಸಂಜೆ 6.00 ಗಂಟೆಗೆ ಹರಪನಹಳ್ಳಿ ತಾ|| ಜಿ. ದಾದಾಪುರದಲ್ಲಿ ನೆರವೇರಿಸಲಾಯಿತು.

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
ಪ್ರಸಾದ ದಾಸೋಹ
ಇಂದಿನ ಪ್ರಸಾದ ವಿತರಕರು
ಸ್ಫೂರ್ತಿ ಸೇವಾ ಟ್ರಸ್ಟ್ (ರಿ)
ದಾವಣಗೆರೆ ಇವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

ಸೈಟುಗಳು ಮಾರಾಟಕ್ಕಿವೆ
ಎಸ್.ಎಸ್. 'ಎ' ಬ್ಲಾಕ್ ಪೂರ್ವ 40x77, ದಕ್ಷಿಣ 40x60 ಕಾರ್ನರ್, ಎಸ್.ಎಸ್. 'ಬಿ' ಬ್ಲಾಕ್ ಉತ್ತರ 30x43, 30x46 (ಅಕ್ಕ-ಪಕ್ಕ) ದಕ್ಷಿಣ 30x50, ಮಹಾಲಕ್ಷ್ಮಿ ಲೇಔಟ್ ದಕ್ಷಿಣ 40x60 ಪಶ್ಚಿಮ 30x40 ಸಂಪರ್ಕಿಸಿ
ಐಗೂರು ವಿಜಯ್ ಕುಮಾರ್
99457 02495

ಪ್ರೀತಿಯೇ ದೇವರು
ಕರುಣಾ ಜೀವ ಕಲ್ಯಾಣ ಟ್ರಸ್ಟ್
ಶಿಕ್ಷಣ, ಆರೋಗ್ಯ, ತಳ್ಳುವ ಗಾಡಿ, ಅನ್ನ ದಾಸೋಹದ ದಾನಿಗಳು
ಭಾರತಿ ಮಲ್ಲಪ್ಪ
ಆಂಜನೇಯ ಬಡಾವಣೆ, ದಾವಣಗೆರೆ
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

ಸೈಟ್ ಮಾರಾಟಕ್ಕೆ
ಶಾಮನೂರು ಡಾಲರ್ಸ್ ಕಾಲೋನಿ 40×58 ಉತ್ತರ
ಕಿರಣ್ ಬೂಸ್ನೂರ್
ಮೊ. : 98440-63409

ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟ್‌ಗಳು ಮಾರಾಟಕ್ಕಿವೆ
30x40 North, 34 ಲಕ್ಷಕ್ಕೆ, 28 ಲಕ್ಷ ಬ್ಯಾಂಕ್ ಲೋನ್‌ಗೆ ಒಪ್ಪುತ್ತಾರೆ. 40x60 South ಸೈಟ್, 40x60 North ಸೈಟ್, 40x60 East ಸೈಟ್, 30x50 West 60 ಅಡಿ ರೋಡಿಗಿದೆ.
ಐನಹಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಮನೆಗಳು ಮಾರಾಟಕ್ಕಿವೆ
40x60 North, ಮೂರು ಬೆಡ್ ರೂಂ ಮನೆ ಕುವೆಂಪು ಬಡಾವಣೆಯಲ್ಲಿ 30x40 East, 30x40 West, 30x50 North, 30x50 West ಹೈಟೆಕ್ ಲೇಔಟ್‌ನಲ್ಲಿ, ಚಿಗಟೇರಿ ಲೇಔಟ್‌ನಲ್ಲಿ
ಐನಹಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಜಮೀನು ಮಾರಾಟಕ್ಕಿದೆ
ಹಿರೇಮೇಗಳಗೆರೆ ಸಮೀಪದಲ್ಲಿ 5.53 ಮತ್ತು 6.55 ಎಕರೆ ಕಾರ್ನರ್ ಒಟ್ಟು ವಿಸ್ತೀರ್ಣ 12.08 ಎಕರೆ, ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ. 3 ಬೋರ್‌ಗಳಿವೆ. ಕಾಡಜ್ಜಿ ಕೃಷಿ ವಿಜ್ಞಾನ ಕೇಂದ್ರದಿಂದ 3 ಕಿಲೋಮೀಟರ್‌ದಲ್ಲಿದೆ. ದಾವಣಗೆರೆಯಿಂದ 10 ಕಿ.ಮೀ.ನಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

ಮನೆಗಳು ಮಾರಾಟಕ್ಕಿವೆ
ಎಸ್.ಎಸ್. 'ಎ' ಬ್ಲಾಕ್ ಅಥಣಿ ಕಾಲೇಜ್ ರಸ್ತೆ ಪೂರ್ವ 30x46 ಡೂಪ್ಲೆಕ್ಸ್, ಎಸ್.ಎಸ್. 'ಬಿ' ಬ್ಲಾಕ್ ಪೂರ್ವ 30x40 (5 TV Units) (ಡೂಪ್ಲೆಕ್ಸ್) ಹಾಗೂ ಪೂರ್ವ 30x40 (ಹಳೆ ಮನೆ ಸೈಟ್ ರೇಟ್), 30x50 ಪೂರ್ವ ಎಸ್.ಎಸ್. ಹೈಟೆಕ್ ಉತ್ತರ 30x50, ಸರಸ್ವತಿ ಬಡಾವಣೆ ಪಶ್ಚಿಮ, 20x30 (ಮೇಲೆ ಕೆಳಗೆ ಮನೆ)
ಐಗೂರು ವಿಜಯ್ ಕುಮಾರ್
99457 02495

10 to 80 ರಿಯಾಯಿತಿ
ನಮ್ಮಲ್ಲಿ ಬ್ರಾಂಡೆಡ್ & ಜನರಿಕ್ ಮೆಡಿಷನ್ಸ್‌ಗಳು 10% ರಿಂದ 80% ವರೆಗೆ ರಿಯಾಯಿತಿ ದರದಲ್ಲಿ ಸಿಗುತ್ತವೆ. ಪಲ್ಸ್ ಆಕ್ಸಿಮೀಟರ್, ಬಿ.ಪಿ ಮಾನಿಟರ್ ಇನ್ನೂ ಅನೇಕ ಉಪಕರಣಗಳು ಸಿಗುತ್ತವೆ. ಒಮ್ಮೆ ಭೇಟಿ ಕೊಡಿ
S.R. Medical & General Store
Shamanuru Rood, Davanagere.
97434 47076, 70192 49897

40x60 ಸೈಟ್‌ಗಳು ಮಾರಾಟಕ್ಕಿವೆ
40x60 North, ವಿವೇಕಾನಂದ ಬಡಾವಣೆಯಲ್ಲಿ, 40x60 West, ರಂಗನಾಥ ಬಡಾವಣೆಯಲ್ಲಿ, 60x40 North ಸಿದ್ದವೀರಪ್ಪ ಬಡಾವಣೆಯಲ್ಲಿ 40x60 South ವಿವೇಕಾನಂದ ಬಡಾವಣೆಯಲ್ಲಿ
ಐನಹಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಹೊಂಬಾಳ್ ಇ-ಮಾರ್ಟ್
ಬಾಕಿ ಉಳಿದಿರುವ ಒಂದು ಮಾರ್ಟನ್ನು ತೆರೆಯಲು ಕೇವಲ ಒಬ್ಬರು ಹೂಡಿಕೆದಾರರು ಬೇಕಾಗಿದ್ದಾರೆ. ಕನಿಷ್ಠ 3% ನಿರ್ದಿಷ್ಟ ಆದಾಯದ ಜೊತೆಗೆ 50% ಲಾಭವನ್ನು ಕೊಡಲಾಗುವುದು. ಆಸಕ್ತರು ಕರೆ ಮಾಡಿ ಚರ್ಚಿಸಿ
9008985112

ಮನೆಗಳು ಲೀಜಿಗೆ ಇವೆ
ವಿದ್ಯಾನಗರ, ತರಳಬಾಳು ಬಡಾವಣೆಯಲ್ಲಿ 2 ಬೆಡ್‌ರೂಂ ಕೆಳಗಿನ ಹೊಸ ಮನೆ, 2 ಬೆಡ್ ರೂಂ ಮೊದಲನೇ ಮಹಡಿಯಲ್ಲಿ. ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

ಉತ್ತಮ ಗುಣಮಟ್ಟದ
ಎಂ.ಸ್ಯಾಂಡ್, 20.MM ಡಸ್ಟ್ ಮಿಕ್ಸ್ ಗ್ರಾವೆಲ್‌ಗಾಗಿ
ಸಂಪರ್ಕಿಸಿ
98451 95627

ಸಸಿಗಳು ದೊರೆಯುತ್ತವೆ
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

ನಿಮಗೆ ಜಮೀನು ಕೊಳ್ಳುವುದಕ್ಕೆ ಬೇಕೇ?
(ಬೆದ್ದಲು, ನೀರಾವರಿ, ಅಡಿಕೆ. ತೆಂಗಿನ ತೋಟ)
ಕಿರಣ್ ಬೂಸ್ನೂರ್ : 98440-63409

ಸೈಟ್‌ಗಳು ಮಾರಾಟಕ್ಕಿವೆ
ಬನಶಂಕರಿ ಬಡಾವಣೆಯಲ್ಲಿ 30x50 ಉತ್ತರ, 30x50 ಪಶ್ಚಿಮ, ಶಿವ ಪಾರ್ವತಿ ಬಡಾವಣೆಯಲ್ಲಿ 30x50 ಪೂರ್ವ, 30x50 ಪಶ್ಚಿಮ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40x60 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

ಮನೆ ಬಾಡಿಗೆಗೆ ಇದೆ
ಮಹಾಲಸ ನಿಲಯ 4ನೇ ಮೇನ್, 4ನೇ ಕ್ರಾಸ್, ವಿನೋಬನಗರ
Contact: 94488 73541
ಸುಬ್ಬರಾವ್ ವೆರ್ಣೇಕರ್
72598 76703

ಬೇಕಾಗಿದ್ದಾರೆ
ಡ್ಯೂಟಿ ಡಾಕ್ಟರ್, ನರ್ಸ್‌ಗಳು, ಆಯಾ
ಸಂಪರ್ಕಿಸಿ
96869 99260

ನಾಟಿ ಕೋಳಿ ಮೊಟ್ಟೆ
(RIR ಜಾತಿ)
Organic Eggs Available
90082 03418
63645 96567

ಭೂಮಿಕಾ ಮ್ಯಾಟ್ರಿಮೊನಿ
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

ಮನೆ ಲೀಜ್‌ಗೆ ಇದೆ
2 ಬೆಡ್ ರೂಂ, ಸೋಲಾರ್ ಇದೆ
ವಿಳಾಸ : ತಿರುಮಲೇಶ್ ಬಿ., KSRTC ರಸ್ತೆ, ಆರ್.ವಿ.ಕೆ. ಸ್ಕೂಲ್ ಎದುರು, ನಿಟುವಳ್ಳಿ, ದಾವಣಗೆರೆ-4.
80503 21533, 84311 69133

ಜಾಗ ಮಾರಾಟಕ್ಕೆ ಇದೆ
ಹರಿಹರದಲ್ಲಿ ಪಿ.ಬಿ. ರಸ್ತೆ, ಕಾಳಿದಾಸ ನಗರ, ವಿ.ಆರ್.ಎಲ್. ಗೋಡೌನ್ ರಸ್ತೆ, ನೂರ್ ಮಸೂದಿ ಹತ್ತಿರ, 4 ಗುಂಟೆ ಜಾಗ ಮಾರಾಟಕ್ಕೆ ಇದೆ. (ಗುಂಟೆ ಲೆಕ್ಕದಲ್ಲಿ)
81236 31621
99641 64895

ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

OLD AGE HOME
Safety and Hygiene, 24 Hours Doctor & Specialist consultation Permanent bedside Nursing, Physiotherapy, 24 Hours Ambulance, TV DTH Wifi, Special Diet Menu
CONTACT: 9071106106

ಸೈಟ್‌ಗಳು ಮಾರಾಟಕ್ಕಿವೆ
ಆರ್ಕಷಕ ಬೆಲೆಯಲ್ಲಿ ಸೈಟುಗಳು ಮಾರಾಟಕ್ಕಿವೆ. ಎಸ್.ಎಸ್. ಲೇಔಟ್ 4ನೇ ಮೇನ್, 10ನೇ ಕ್ರಾಸ್‌ನಲ್ಲಿ 7350 Sqft North Facing ಮತ್ತು ಎಂ.ಸಿ.ಸಿ. 'ಎ' ಬ್ಲಾಕ್ ಆಶ್ರಯ ಹಾಸ್ಪಿಟಲ್ ರೋಡ್‌ನಲ್ಲಿ 95x142 South Facing
98869 88099, 97319 99977
8884228109

2BHK ಮನೆಗಳು ಬಾಡಿಗೆಗೆ ಇವೆ
ಕುಂದವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್ ಕಾವೇರಿ ಅಪಾರ್ಟ್‌ಮೆಂಟ್ ಹಿಂಭಾಗದಲ್ಲಿ ಎಲ್ಲಾ ಆಧುನಿಕ ಸೌಕರ್ಯಗಳಿರುವ ಎರಡು ಬೆಡ್‌ರೂಂ ಹಾಗೂ ಅಟ್ಯಾಚ್ ಬಾತ್‌ರೂಂವುಳ್ಳ 14 ಹೊಸ ಮನೆಗಳು ರಿಯಾಯಿತಿ ದರದಲ್ಲಿ ಬಾಡಿಗೆಗೆ ಇವೆ.
73380 43912
63663 27368

ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ
ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ
ಫೋನ್ ನಂ:
74118 62216

ಬೇಕಾಗಿದ್ದಾರೆ
ಎಸ್.ಎನ್. ಎಂಟರ್‌ಪ್ರೈಸಸ್ ವಾಟರ್ ಪ್ಯೂರಿಫೈಯರ್ ಆಫೀಸ್‌ನಲ್ಲಿ ಟೆಲಿ ಮಾರ್ಕೆಟಿಂಗ್ ಮಾಡಲು ಯುವತಿಯರು (ಅವಿವಾಹಿತ) ಸಂಬಳ 7000 ರಿಂದ 8000/- ಹೆಲ್ಪರ್ ಕೆಲಸಕ್ಕಾಗಿ ಯುವಕರು (ಬೈಕ್ ಹೊಂದಿರಬೇಕು) ಸಂಬಳ 9000 ದಿಂದ 10,000/-
ಟೆಲಿ ಮಾರ್ಕೆಟಿಂಗ್: 78992 96668
99642 22603, ಹೆಲ್ಪರ್: 63635 61283

ತಕ್ಷಣ ಬೇಕಾಗಿದ್ದಾರೆ
ಕೊರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. Two wheeler ಬೈಕ್ ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು.
Call : 9480795548, 9880042597
Whatsapp No: 70199 83025 (Resume)

HOME TUTION
8,9,10 ಮತ್ತು 11ನೇ ತರಗತಿಗಳಿಗೆ. ವಿಷಯಗಳು: Physics, Chemistry and Mathematics
ಸಂಪರ್ಕಿಸಿ
98808 23640

ಮನೆ ಮಾರಾಟಕ್ಕಿದೆ
ಕೆಟಿಜೆ ನಗರ, 16ನೇ ಕ್ರಾಸ್, 1ನೇ ಮೇನ್, (ಬಾಪೂಜಿ ಆಸ್ಪತ್ರೆ ರಸ್ತೆ) 12.5 x 40 ಅಡಿ ಜಾಗದಲ್ಲಿ ಕಟ್ಟಿರುವ ಮನೆ ಮಾರಾಟಕ್ಕಿದೆ.
ಆಸಕ್ತರು ನೇರವಾಗಿ ಸಂಪರ್ಕಿಸಿ :
ಕೆ.ಎಂ. ಚಂದ್ರಶೇಖರ್
81054 57272

ಬೇಕಾಗಿದ್ದಾರೆ
1) ಕಾಲ್‌ಸೆಂಟರ್-ಗರ್ಲ್ಸ್
2) ಡೆಲಿವರಿ-ಬಾಯ್ಸ್ (ಸೈಕಲ್ ಇದ್ದವರಿಗೆ ಆದ್ಯತೆ)
3) ಸೇಲ್ಸ್ ಬಾಯ್ಸ್-ಕಾಂಟ್ರ್ಯಾಕ್ಟ್
ಶ್ರೀ ಕುರುವತ್ತಿ ಬಸವೇಶ್ವರ ಫಾರ್ಮಾ
1ನೇ ಮಹಡಿ, ಕಾಲೇಜ್ ರೋಡ್, ಪಿ.ಜೆ. ಬಡಾವಣೆ
ಡಾ|| ಆಲೂರು ಮಂಜುನಾಥ್ ಹಾಸ್ಪಿಟಲ್ ಪಕ್ಕ, ದಾವಣಗೆರೆ.
95132 22192

JOBS
MCS ACADEMY
Training & Placement Cell
98444 92888

ಮನೆ ಬಾಡಿಗೆಗೆ/ಲೀಸ್‌ಗೆ
ಶಕ್ತಿನಗರದಲ್ಲಿ ಸಿಂಗಲ್ ಬೆಡ್ ರೂಂ ಹೊಂದಿರುವ ಮನೆ ಬಾಡಿಗೆಗೆ/ ಲೀಸ್‌ಗೆ ದೊರೆಯುತ್ತದೆ.
94484 39639
63665 96479

SHARP
Call for Interview Service
Engineers, Diploma/ITI with two wheeler Service of Sharp Company.
Office Photo Copia Machines
Gaurov Communications, Davangere.
93799 06688, 94487 28866

ನೇರ ಪರೀಕ್ಷೆಗಳು
ಮನೆಯಲ್ಲೆ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

Wanted ITI (Fitter)
Freshers for a manufacturing unit situated in Davangere Industrial area
Walk in interview at
Sri Sai International Hotel
on Tuesday from 11.30 am to 1.30 pm
Vacant post 20 man Power
99026 97197, 95356 25353

ಬೇಕಾಗಿದ್ದಾರೆ
ಕ್ಯಾಷಿಯರ್-1, ಸೇಲ್ಸ್ ಗರ್ಲ್ಸ್ - 5, ಸೇಲ್ಸ್ ಬಾಯ್ಸ್ -5 ಕ್ಲೀನಿಂಗ್-1
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ.

ಜಮೀನು ಮಾರಾಟಕ್ಕಿದೆ
ಮಿಟ್ಲಕಟ್ಟೆ ರಿ.ಸ.ನಂ 7/16 ರಲ್ಲಿ 17 ಗುಂಟೆ ಜಮೀನು ಮಾರಾಟಕ್ಕಿದೆ. ಮೇನ್ ರೋಡ್ ಪಕ್ಕ ಶ್ಯಾಮನೂರಿನಿಂದ 3 ಕಿಲೋ ಮೀಟರ್, ಮಿಟ್ಲಕಟ್ಟೆ
98443 60459, 87220 14318
95352 69849

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

ಮಾಸ್ಕ್ ಬಳಸಿ
ಕೊರೊನಾ ತೊಲಗಿಸಿ

ಪ್ರವೇಶ ಪ್ರಕಟಣೆ 2020-21
SSLC/PUC/ ITI ಪಾಸ್/ಫೇಲ್ ನಂತರ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಅರೆ ಸರ್ಕಾರಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276 93533 49357

ಬೇಕಾಗಿದ್ದಾರೆ
ನಗರದ ಪ್ರತಿಷ್ಠಿತ ಮನೆಯೊಂದರಲ್ಲಿ ಮನೆ ಕೆಲಸ ಹಾಗೂ ಮನೆಯ ಎಲ್ಲಾ ಜವಾಬ್ದಾರಿ ನಿರ್ವಹಿಸಲು ಮಹಿಳೆ ಬೇಕಾಗಿದ್ದಾರೆ. ಊಟ ವಸತಿ ವ್ಯವಸ್ಥೆ ಇದೆ.
ಸಂಬಳ: 20,000/- ಸಂಪರ್ಕಿಸಿ
7829191921

ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 23.06.2021 ರಂದು ನಿಧನರಾದ ನಮ್ಮ ಸಂಘದ ಮಾಜಿ ಉಪಾಧ್ಯಕ್ಷರು, ಹಾಲಿ ನಿರ್ದೇಶಕರಾದ
ಶ್ರೀ ಎ. ಹನುಮಂತಪ್ಪನವರಿಗೆ
ನಮ್ಮೆಲ್ಲರ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಆಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.
ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ
ದಾವಣಗೆರೆ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘ ನಿ.,
ಆರ್.ಎಂ.ಸಿ. ರಸ್ತೆ, ದಾವಣಗೆರೆ.

ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.06.2021ರಂದು ನಿಧನರಾದ
ನಮ್ಮ ಸಂಘದ ಮಾಜಿ ಉಪಾಧ್ಯಕ್ಷರೂ, ಜನತಾಬಜಾರ್ ಮಾಜಿ ನಿರ್ದೇಶಕರೂ ಆದ
ಶ್ರೀ ಎ. ಹನುಮಂತಪ್ಪ (ಸೊಸೈಟಿ)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ನಿರ್ದೇಶಕರು ಹಾಗೂ ಸರ್ವ ಸದಸ್ಯರು
ದಾವಣಗೆರೆ ಜಿಲ್ಲಾ ಮಡಿವಾಳ ಮಾಚಿದೇವ ಸಂಘ (ರಿ.)
1ನೇ ಮೇನ್, 17ನೇ ಕ್ರಾಸ್, ವಿನೋಬನಗರ, ದಾವಣಗೆರೆ.

# ಸರ್ಕಾರದ ಧನ ಸಹಾಯಕ್ಕೆ ಮೋಸ ಹೋಗದಿರಿ



### ಹೊನ್ನಾಳಿಯಲ್ಲಿ ಕಾರ್ಮಿಕ ನಿರೀಕ್ಷಕ ರಾಜಶೇಖರ್ ಹಿರೇಮಠ

ಹೊನ್ನಾಳಿ, ಜೂ.24- ಕಟ್ಟಡ ನಿರ್ಮಾಣ ಕಾರ್ಮಿಕರು 3000 ರೂ. ಧನ ಸಹಾಯ ಪಡೆಯಲು ಕಾರ್ಮಿಕ ಇಲಾಖೆಯಿಂದ ಯಾವುದೇ ದಾಖಲಾತಿಗಳನ್ನು ಸಂಗ್ರಹಿಸಲು ನಿರ್ದೇಶಿಸಿರುವುದಿಲ್ಲ, ಕಾರ್ಮಿಕರು ಮೋಸ ಹೋಗದಂತೆ ಎಚ್ಚರದಿಂದಿರಬೇಕು ಎಂದು ಕಾರ್ಮಿಕ ನಿರೀಕ್ಷಕ ರಾಜಶೇಖರ್ ಹಿರೇಮಠ ತಿಳಿಸಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಕೋವಿಡ್-19 ಸಹಾಯವಾಣಿ ಭಿತ್ತಿಪತ್ರಗಳನ್ನು ಗೋಡೆಯ ಮೇಲೆ ಹಚ್ಚಿದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಕೆಲವು ಮಧ್ಯವರ್ತಿಗಳು, ಸಂಘ-ಸಂಸ್ಥೆಗಳು ಇಲಾಖೆಗೆ ಧನಸಹಾಯ ಪಡೆಯಲು ಹೊಸದಾಗಿ ಆನ್‌ಲೈನ್‌ನಲ್ಲಿ ಅರ್ಜಿ ಹಾಕಬೇಕಾಗಿದೆ ಎಂದು ತಪ್ಪು ಮಾಹಿತಿ ನೀಡಿ, ಕಾರ್ಮಿಕರಿಂದ ಹಣ ಪಡೆದು ಅವರ ದಾಖಲಾತಿಗಳನ್ನು ಪಡೆಯುತ್ತಿರುವುದು ಕೇಳಿ ಬರುತ್ತಿದ್ದು, ಆದ್ದರಿಂದ ಕಾರ್ಮಿಕರು ಧನಸಹಾಯ ಪಡೆಯಲು ಯಾವುದೇ ದಾಖಲಾತಿಗಳನ್ನು ಮತ್ತು ಹಣವನ್ನು ನೀಡಬಾರದೆಂದು ತಿಳಿಸಿದರು.

ಈಗಾಗಲೇ ನೋಂದಣಿಯಾಗಿರುವ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಕಾರ್ಮಿಕ ಇಲಾಖೆಯಿಂದ ಹಣ ಸಂದಾಯ ಮಾಡುವ ವ್ಯವಸ್ಥೆ ಮಾಡಲಾಗುವುದು. ಯಾರಾದರೂ ಹಣ ಸಂಗ್ರಹಿಸಿದ್ದರೆ ನೇರವಾಗಿ ಕಾರ್ಮಿಕ ಇಲಾಖೆಗೆ ದೂರು ನೀಡಬೇಕು ಎಂದು ಅವರು ಕರೆ ನೀಡಿದ್ದಾರೆ.

ಕೋವಿಡ್ ಎರಡನೇ ಅಲೆ ಪರಿಣಾಮ ಆರ್ಥಿಕ ಸಂಕಷ್ಟದಲ್ಲಿರುವ 11 ವರ್ಗಗಳ ಅಸಂಘಟಿತ ಕಾರ್ಮಿಕ ವರ್ಗದವರಿಗೆ ತಲಾ 2000 ರೂ. ಧನ ಸಹಾಯ ನೀಡುತ್ತಿದ್ದು, ಜುಲೈ 30 ರೊಳಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ ಧನಸಹಾಯ ಪಡೆಯಬಹುದಾಗಿದೆ.

2020 ನೇ ಸಾಲಿನ ಲಾಕ್‌ಡೌನ್‌ನಿಂದ ಸರ್ಕಾರದಿಂದ ಘೋಷಿಸಲ್ಪಟ್ಟಿದ್ದ 5000 ರೂ.ಗಳ ಪರಿಹಾರ ಧನವನ್ನು ಪಡೆದ ಅಗಸರು ಮತ್ತು ಕ್ಷೌರಿಕರು ಮತ್ತೆ ಅರ್ಜಿ ಸಲ್ಲಿಸಬೇಕಾಗಿಲ್ಲ, ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಸಂದಾಯವಾಗಲಿದೆ ಎಂದು ತಿಳಿಸಿದರು.

ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು, ಭಟ್ಟಿ ಕಾರ್ಮಿಕರು ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ, ಧನ ಸಹಾಯ ಪಡೆಯಬಹುದು.

ಕಾರ್ಮಿಕ ಇಲಾಖೆಯಿಂದ ಬಾರ್‌ಬೆಂಡಿಂಗ್ ಮತ್ತು ಪೇಂಟರ್ ವೃತ್ತಿ ಮಾಡುವ 25 ಕಾರ್ಮಿಕರಿಗೆ ಟೂಲ್ ಕಿಟ್‌ಗಳನ್ನು ವಿತರಿಸಲಾಗಿದೆ ಎಂದು ಅವರು ವಿವರಿಸಿದರು.

ಈ ಸಂದರ್ಭದಲ್ಲಿ ಪುರಸಭೆಯ ಸಮುದಾಯ ಅಭಿವೃದ್ಧಿ ಅಧಿಕಾರಿ ಸಿ. ಅಶೋಕ್, ಕಾರ್ಮಿಕ ಇಲಾಖೆಯ ಸಿಬ್ಬಂದಿ ಅನಿಲ್, ಸಮಾಜ ಸೇವಕ ಅಡಿಕೆ ರವಿ ಮತ್ತಿತರರು ಉಪಸ್ಥಿತರಿದ್ದರು.

## ಶ್ಯಾಮ್ ಪ್ರಸಾದ್ ಸ್ಮರಣಾರ್ಥ ನಗರದಲ್ಲಿ ವೃಕ್ಷಾರೋಹಣ



ದಾವಣಗೆರೆ, ಜೂ.24- ಜನ ಸಂಘದ ಸಂಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಬಲಿದಾನ ದಿನದ ಅಂಗವಾಗಿ ಭಾರತೀಯ ಜನತಾ ಪಕ್ಷದ ರೈತ ಮೋರ್ಚಾ ಹಮ್ಮಿಕೊಂಡಿರುವ 14 ದಿನಗಳ ವೃಕ್ಷಾರೋಹಣ ಕಾರ್ಯಕ್ರಮಕ್ಕೆ ನಗರದ ಸರ್ಕಾರಿ ಮಹಿಳಾ ಪದವಿ ಕಾಲೇಜು ಆವರಣದಲ್ಲಿ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾಗರಾಜ್ ಲೋಕಿಕೆರೆ ಸಸಿಗಳನ್ನು ನೆಡುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಾನವನ ದುರಾಸೆಯಿಂದ ಪರಿಸರ ಹಾಳಾಗುತ್ತಿದ್ದು, ಇದು ಮಾನವನಿಂದಲೇ ಸರಿ ಯಾಗಬೇಕಿದೆ. ಮುಂದಿನ ಪೀಳಿಗೆಗೆ ಪರಿಸರದ ಬಗ್ಗೆ ಕಾಳಜಿ ಮೂಡಿಸದಿದ್ದರೆ ಮುಂದೆ ಹೆಚ್ಚಿನ ಅಪಾಯ ಎದುರಾಗಲಿದೆ. ನಮಗೆ ಉಪಯೋಗವಾಗುವ ಪ್ರತಿ ವಸ್ತುಗಳನ್ನು ಗೌರವಿಸಬೇಕು. ಗಿಡ, ಮರಗಳನ್ನು ನಾವು ಗೌರವಿಸಿ ರಕ್ಷಿಸಿದರೆ ಅವುಗಳು ನಮ್ಮ ಜೀವ ರಕ್ಷಣೆ ಮಾಡುತ್ತವೆ ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಬಿ.ಕೆ. ಶಿವಕುಮಾರ್, ಕಾರ್ಯದರ್ಶಿ ಎ.ಎಂ. ಶಿವಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

## ಮಲೇರಿಯಾ ವಿರೋಧಿ ಮಾಸಾಚರಣೆ



### ಹೊಳೆಸಿರಿಗೆರೆ

ಮಲೇಬೆನ್ನೂರು, ಜೂ.24- ಹೊಳೆಸಿರಿಗೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 'ಮಲೇರಿಯಾ ವಿರೋಧಿ ಮಾಸಾಚರಣೆ' ಕಾರ್ಯಕ್ರಮವನ್ನು ಗುರುವಾರ ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ವಿ.ಹೊರಕೇರಿ ಮಾತನಾಡಿ, ಮಲೇರಿಯಾ ರೋಗವು ಸೊಳ್ಳೆಗಳಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಹಾಗಾಗಿ ಸೊಳ್ಳೆ ಉತ್ಪತ್ತಿ ಆಗುವ ಸ್ಥಳಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕೆಂದು ಗ್ರಾಮಸ್ಥರಿಗೆ ತಿಳಿಸಿದರು.

ವೈದ್ಯಾಧಿಕಾರಿ ಡಾ.ಡಿ.ಬಿ.ಚೇತನ್, ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮಣ್ಣ, ತಾ.ಕ್ಷೇತ್ರ ಶಿಕ್ಷಣಾಧಿಕಾರಿ ಪಾಟೀಲ್, ತಾಲ್ಲೂಕು ಆಶಾ ಮೇಲ್ವಿಚಾರಕರಾದ ಆಶಾ, ಆರೋಗ್ಯ ಸಹಾಯಕರಾದ ಪ್ರಹ್ಲಾದ್, ಪ್ರಕಾಶ್‌ನಾಯ್ಕ, ಆರೋಗ್ಯ ವಾಣಿ ಸವಿತಾ, ಆಶಾ ರಾಣಿ, ಭಾಗ್ಯಲಕ್ಷ್ಮಿ ಸೇರಿದಂತೆ ಕಾರ್ಯಕರ್ತೆಯರು ಭಾಗವಹಿಸಿದ್ದರು.

## ಸೌದಿಯಲ್ಲಿ ಗೃಹಬಂಧನಲ್ಲಿದ್ದ ಮಹಿಳೆ ಸ್ವದೇಶಕ್ಕೆ : ಕೃತಜ್ಞತೆ



ದಾವಣಗೆರೆ, ಜೂ.24- ಸೌದಿಗೆ ತೆರಳಿದ್ದ ತಮ್ಮನ್ನು ಮರಳಿ ಸ್ವದೇಶಕ್ಕೆ ಕರೆತರಲು ಕಾರಣರಾಗಿರುವ ಸಂಸದರು, ಜಿಲ್ಲಾಧಿ ಕಾರಿಗಳು, ಎಸ್ಪಿ ಹಾಗೂ ಮತ್ತಿತರರಿಗೆ ಫೈರೋಜಾಬಾನು ಕೃತಜ್ಞತೆ ಸಲ್ಲಿಸಿದ್ದಾರೆ.

ಕೆಲಸ ಅರಸಿ ಸೌದಿಗೆ ತೆರಳಿದ್ದ ತಮ್ಮನ್ನು ಅಲ್ಲಿ ಗೃಹಬಂಧನದಲ್ಲಿ ಇರಿಸಲಾಗಿತ್ತು. ತಮ್ಮ ಸಹೋದರಿ ನಸ್ರೀನ್ ಅವರು ಇಲ್ಲಿನ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾ ಧಿಕಾರಿಗೆ ಈ ಬಗ್ಗೆ ಮನವಿ ಸಲ್ಲಿಸಿದ್ದರು. ದೇವನಗರಿ ಗ್ಯಾಸ್ ಏಜೆನ್ಸಿಯ ಮಾಲೀಕ ಹೆಚ್.ಎಂ. ರುದ್ರಮುನಿಸ್ವಾಮಿ ಅವರು ಸಂಸದರ ಗಮನಕ್ಕೆ ತಂದ ಪರಿಣಾಮ, ಕಾಂಗ್ರೆಸ್ ಮುಖಂಡ ಸೈಯದ್ ಖಾಲಿದ್ ಅವರ ಅಗತ್ಯ ಸಹಕಾರದಿಂದ ತಾವು ಸ್ವ-ಸ್ಥಾನಕ್ಕೆ ಮರಳಲು ಸಹಾಯವಾಗಿದೆ ಎಂದು ಅವರು ಸ್ಮರಿಸಿದ್ದಾರೆ.

## ಕಲಾವಿದರ ನೆರವಿಗೆ 'ಕಲಾನಿಧಿ'

ಬೆಂಗಳೂರು, ಜೂ.24 - ಕೋವಿಡ್ ಸಂಕಷ್ಟಕ್ಕೆ ಸಿಲುಕಿರುವ ಸಂಗೀತ ಕಲಾವಿದರ ನೆರವಿಗಾಗಿ ರೂಪಿಸಲಾಗಿರುವ ಕಲಾನಿಧಿ-2021 ಸಂಗೀತ ಕಾರ್ಯಕ್ರಮ ಶುಕ್ರವಾರದಿಂದ ಭಾನುವಾರದವರೆಗೂ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗಲಿದ್ದು, ಎಲ್ಲರೂ ವೀಕ್ಷಿಸಿ, ಉದಾರವಾಗಿ ದೇಣಿಗೆ ನೀಡಬೇಕು ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಗುರುವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ತೇಜಸ್ವಿ ಸೂರ್ಯ, ಖ್ಯಾತ ಗಾಯಕ ವಿಜಯ್ ಪ್ರಕಾಶ್ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ರೂಪಿತವಾಗಿದೆ. ನಾಳೆ ಶುಕ್ರವಾರ ಮತ್ತು ಶನಿವಾರ ಸಂಜೆ 7ರಿಂದ 10 ಗಂಟೆವರೆಗೆ, ಭಾನುವಾರ 4ರಿಂದ 10 ಗಂಟೆ ತನಕ ಕಾರ್ಯಕ್ರಮ ಪ್ರಸಾರ ಆಗಲಿದೆ ಎಂದವರು ಹೇಳಿದರು.

ಯುಟ್ಯೂಬ್ ಸೇರಿ ನಮ್ಮ ಮೂವರ ಜಾಲತಾಣಗಳ ಖಾತೆಗಳಲ್ಲಿ ಕಲಾನಿಧಿ ಕಾರ್ಯಕ್ರಮ ಪ್ರಸಾರವಾಗಲಿದೆ. ವಿಜಯ ಪ್ರಕಾಶ್, ಸೋನು ನಿಗಮ್ ಸೇರಿದಂತೆ ನೂರಕ್ಕೂ ಹೆಚ್ಚು ಖ್ಯಾತ ಕಲಾವಿದರು, ಉದಯೋನ್ಮುಖ ಸಂಗೀತಗಾರರು ತಮ್ಮ ಸಂಗೀತ ಸುಧೆ ಹರಿಸಿದ್ದಾರೆ.

ಪ್ರತಿಯೊಬ್ಬರೂ ವೀಕ್ಷಿಸಿ ಕಲಾವಿದರ ಕಷ್ಟಕ್ಕೆ ಮಿಡಿಯಬೇಕು. ಕಾರ್ಯಕ್ರಮ ವೀಕ್ಷಣೆ ಮಾಡುತ್ತಿರುವಾಗಲೇ ತೆರೆಯ ಮೇಲೆ ಯಾವ ಖಾತೆಗೆ ಹಣ ವರ್ಗಾಯಿಸಬೇಕು ಎಂಬ ಮಾಹಿತಿಯೂ ಕಾಣಿಸಿಕೊಳ್ಳುತ್ತದೆ ಎಂದು ಡಿಸಿಎಂ ಕೋರಿದರು.

## ರೋಗಕ್ಕೆ ಅಂಟಿರುವ ಕಳಂಕ ತೊಲಗಿಸಿ

(2ನೇ ಪುಟದಿಂದ) ಫಲದಿಂದ ಬರುವುದಿಲ್ಲ, ಹಾಲು ಮತ್ತು ಹಾಲಿನ ಪದಾರ್ಥಗಳು ಉಪಯೋಗ ಮಾಡುವುದರಿಂದ ರೋಗ ಬರುವುದಿಲ್ಲ. ಕೆಲವರು ಇದನ್ನು ಕುಷ್ಠರೋಗ , ಚರ್ಮ ಕ್ಯಾನ್ಸರ್ ಎಂದು ತಪ್ಪು ಗ್ರಹಿಕೆ ಹೊಂದಿರುತ್ತಾರೆ. ಈ ರೋಗಕ್ಕೆ ಯಾವುದೇ ಚಿಕಿತ್ಸೆ ಇಲ್ಲ ಎಂಬ ತಪ್ಪು ಸಂದೇಶ ಜನರಲ್ಲಿ ಇದೆ. ಇವುಗಳೆಲ್ಲ ಮೆಟ್ಟಿ ನಿಂತಾಗ ಮಾತ್ರ 'ವಿಶ್ವ ತೊನ್ನು ದಿನ' ಆಚರಣೆಗೆ ಒಂದು ಅರ್ಥ ಬರುತ್ತದೆ.

ತೊನ್ನು ರೋಗ ಇರುವ ವ್ಯಕ್ತಿಗಳು ಖಿನ್ನತೆ ಮತ್ತು ಬೇಸರಕ್ಕೆ ಒಳಪಡುವ ಅಗತ್ಯವಿಲ್ಲ. ನೀವು ಚರ್ಮ ವೈದ್ಯರನ್ನು ಸಂಪರ್ಕಿಸಿ ಸೂಕ್ತವಾದ ಸಲಹೆ ಪಡೆಯಿರಿ ."ನಿಮ್ಮ ತ್ವಚೆ ನಿಮ್ಮ ಸಂಪತ್ತು" ಹಾಗಾಗಿ ನೀವು ಅದನ್ನು ಕಾಪಾಡಿಕೊಳ್ಳಬೇಕು. ಇದು ಸಾಂಕ್ರಾಮಿಕ ರೋಗವಲ್ಲ. ಆದ್ದರಿಂದ ಇದರ ರೋಗಿಗಳು ಸಾಮಾನ್ಯ ಜೀವನ ನಡೆಸುಬಹದು. "ಬೆಳ್ಳಗಿರೋದೆಲ್ಲ ಹಾಲಲ್ಲ ಹಾಗೆಯೇ ಎಲ್ಲಾ ಬಿಳಿ ಮಚ್ಚೆಗಳು ಕೂಡ ತೊನ್ನು ರೋಗದ ಸಂಕೇತವಲ್ಲ " ಆದ್ದರಿಂದ ನಿಮಗೆ ಸಂಶಯವಿದ್ದರೆ ಹತ್ತಿರದ ಚರ್ಮ ವೈದ್ಯರನ್ನು ಸಂಪರ್ಕಿಸಿ ನಿಮ್ಮ ಸಂಶಯವನ್ನು ದೂರ ಮಾಡಿಕೊಳ್ಳಿ, ಸೂಕ್ತ ಸಲಹೆ ಮತ್ತು ಚಿಕಿತ್ಸೆ ಪಡೆದುಕೊಳ್ಳಿ. ಬನ್ನಿ ಎಲ್ಲರೂ ಕೈ ಜೋಡಿಸಿ ತೊನ್ನು ರೋಗದ ಬಗ್ಗೆ ಇರುವ ಮೌಢ್ಯತೆ ಹೋಗಲಾಡಿಸಲು ಪ್ರಯತ್ನ ಮಾಡೋಣ..

## ಹರಿಹರ ತಾಲ್ಲೂಕಿನಲ್ಲಿ 761 ಟೆಸ್ಟ್, 11 ಜನರಿಗೆ ಸೋಂಕು

ಮಲೇಬೆನ್ನೂರು, ಜೂ.24- ಗುರುವಾರ ಹರಿಹರ ತಾಲ್ಲೂಕಿನಲ್ಲಿ 761 ಕೋವಿಡ್ ಟೆಸ್ಟ್‌ಗಳನ್ನು ಮಾಡಲಾಗಿದ್ದು, ಈ ಪೈಕಿ 443 ಆರ್‌ಟಿಪಿಸಿಆರ್ ಮತ್ತು 318 ರ್‍ಯಾಪಿಡ್ ಟೆಸ್ಟ್ ಆಗಿವೆ.

ರ್‍ಯಾಪಿಡ್ ಟೆಸ್ಟ್‌ನಲ್ಲಿ 11 ಜನರಿಗೆ ಸೋಂಕು ದೃಢಪಟ್ಟಿದೆ. ಬೆಳಗಿನ ವರದಿ ಪ್ರಕಾರ 13 ಜನರಿಗೆ ಆರ್‌ಟಿಪಿಸಿಆರ್ ಟೆಸ್ಟ್‌ನಲ್ಲಿ ಪಾಸಿಟಿವ್ ಬಂದಿದೆ. ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾಗಲಿರುವ ಸುಮಾರು 300 ಶಿಕ್ಷಕರಿಗೆ ಹರಿಹರ ಗುರುಭವನದಲ್ಲಿ ಆರ್‌ಟಿಪಿಸಿಆರ್ ಟೆಸ್ಟ್ ಮಾಡಲಾಗಿದೆ. ಮಲೇಬೆನ್ನೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇವತ್ತು 18 ವರ್ಷ ಮೇಲ್ಪಟ್ಟ 137 ಜನರಿಗೆ ಮತ್ತು 45 ವರ್ಷ ಮೇಲ್ಪಟ್ಟ 16 ಜನರಿಗೆ ಕೋವ್ಯಾಕ್ಸಿನ್ ಮೊದಲ ಡೋಸ್ ಲಸಿಕೆ ಹಾಕಲಾಗಿದ್ದು, ಶುಕ್ರವಾರವೂ ಮುಂದುವರೆಯಲಿದೆ.

## ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ಶೇಂಗಾ ತಳಿಗಳ ಪ್ರಾತ್ಯಕ್ಷಿಕೆ



ದಾವಣಗೆರೆ, ಜೂ.24 - ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ದಾವಣಗೆರೆ ವತಿಯಿಂದ ನ್ಯಾಮತಿ ತಾಲ್ಲೂಕಿನ ರಾಮೇಶ್ವರ ಗ್ರಾಮದಲ್ಲಿ ಶೇಂಗಾ ಬೆಳೆಯ ವಿವಿಧ ತಳಿಗಳ ಇಳುವರಿ ಸಾಮರ್ಥ್ಯದ ಕ್ಷೇತ್ರ ಪ್ರಯೋಗವನ್ನು ನಡೆಸಲಾಯಿತು.

ಶೇಂಗಾ ತಳಿಗಳಾದ G2-52 ಹಾಗೂ GPBD-4 ಬಿತ್ತನೆ ಕಾರ್ಯ ಆರಂಭವಾಗಿದೆ. ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ರೈತರಿಗೆ ಜೈವಿಕ ಗೊಬ್ಬರ, ಬೀಜೋಪಚಾರ ಮಾಡುವುದನ್ನು ಪದ್ಧತಿ ಪ್ರಾತ್ಯಕ್ಷಿಕೆ ಮೂಲಕ ತೋರಿಸಿ ಕೊಡಲಾಯಿತು, ಎರಡೂ ತಳಿಗಳು ಇಳುವರಿ ಹಾಗೂ ಮೇವು ಉತ್ತಮವಾಗಿರುತ್ತದೆ. ಬಿತ್ತನೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಸಣ್ಣ ಗೌಡ ಸಮಗ್ರ ಪೋಷಕಾಂಶ ನಿರ್ವಹಣೆ ಕುರಿತು ರೈತರಿಗೆ ಅರಿವು ಮೂಡಿಸಿದರು ಹಾಗೂ ಎಕರೆಗೆ 200 ಕೆಜಿ ಜಿಪ್ಸಂ ಬಳಸಿದರೆ ಇಳುವರಿಯನ್ನು ಹೆಚ್ಚಿಸಿಕೊಳ್ಳಬಹುದು ಎಂದು ತಿಳಿಸಿದರು. ರಾಮೇಶ್ವರದ ರೈತ ರವಿಕುಮಾರ್ ಅವರ ಕ್ಷೇತ್ರದಲ್ಲಿ ಬಿತ್ತನೆ ಕಾರ್ಯ ನಡೆಯಿತು.

## ಕಾರುಹುಣ್ಣಿಮೆಗಾಗಿ ಎತ್ತುಗಳಿಗೆ ಪೂಜೆ



ಹರಿಹರ, ಜೂ.24- ಕಾರು ಹುಣ್ಣಿಮೆ ಪ್ರಯುಕ್ತ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಅಮರಾವತಿ ಮಹಾದೇವಪ್ಪ ಗೌಡ ಅವರ ಮನೆಯಲ್ಲಿ ಎತ್ತುಗಳಿಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ಮೆರವಣಿಗೆ ಮೂಲಕ ದೇವಸ್ಥಾನಗಳಿಗೆ ಹೋಗಿ ಬರಲಾಯಿತು.

## ಕಾರ್ಮಿಕರ ಖಾಯಮಾತಿಗೆ ಶಿಫಾರಸ್ಸು

(1ನೇ ಪುಟದಿಂದ) ಎಂದವರು ಹೇಳಿದರು.

ಪ್ರಸಕ್ತ ನಗರಗಳಲ್ಲಿ 700 ಜನರಿಗೆ ಒಬ್ಬರು ಪೌರ ಕಾರ್ಮಿಕರಿದ್ದಾರೆ. ಹಳ್ಳಿಗಳಲ್ಲಂತೂ 4-5 ಸಾವಿರ ಜನರಿಗೆ ಒಬ್ಬರು ಪೌರ ಕಾರ್ಮಿಕರಿದ್ದಾರೆ. ನಗರಗಳಲ್ಲಿ 500 ಜನರಿಗೆ ಒಬ್ಬರು ಹಾಗೂ ಗ್ರಾಮೀಣ ಭಾಗದಲ್ಲಿ ಸಾವಿರ ಜನರಿಗೆ ಒಬ್ಬರು ಪೌರ ಕಾರ್ಮಿಕರಿರುವಂತೆ ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಸಲ್ಲಿಸಲಾಗುವುದು ಎಂದು ಹೇಳಿದರು.

ಪೌರ ಕಾರ್ಮಿಕರಿಗೆ ತಿಂಡಿಗಾಗಿ ಕೇವಲ 20 ರೂ. ನೀಡಲಾಗುತ್ತಿದೆ. ಇದನ್ನು 50 ರೂ.ಗಳಿಗೆ ಹೆಚ್ಚಿಸಬೇಕಿದೆ. ನಗರ ಸ್ಥಳೀಯ ಸಂಸ್ಥೆಗಳು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಸಫಾಯಿ ಕರ್ಮಚಾರಿಗಳು ಸಾಲಕ್ಕಾಗಿ ನಿಗಮಗಳಿಗೆ ಅರ್ಜಿ ಸಲ್ಲಿಸಿದರೂ ಸಾಲ ಸಿಗುತ್ತಿಲ್ಲ ಎಂಬ ವರದಿಗಳಿವೆ. ಬ್ಯಾಂಕುಗಳು ನಿಯಮಗಳ ನೆಪ ಹೇಳದೇ ಸಾಲ ನೀಡಬೇಕೆಂದು ಸೂಚಿಸಲಾಗುವುದು ಎಂದವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್, ಸಫಾಯಿ ಕರ್ಮಚಾರಿ ಆಯೋಗದ ಕಾರ್ಯದರ್ಶಿ ರೂಪ, ಮಹಾಪೌರರಾದ ಎಸ್.ಟಿ. ವೀರೇಶ್, ಎಸಿ ಮಮತ ಹೊಸಗೌಡರ್, ಡಿಹೆಚ್‌ಓ ಡಾ.ನಾಗರಾಜ್, ನಗರಾಭಿವೃದ್ಧಿ ಯೋಜನಾಧಿಕಾರಿ ನಜ್ಮಾ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಕೌಸರ್ ರೇಷ್ಮ, ಪಾಲಿಕೆ ಆಯಕ್ತ ವಿಶ್ವನಾಥ ಮುದಜ್ಜಿ ಮತ್ತಿತರರು ಉಪಸ್ಥಿತರಿದ್ದರು.

### ಜಿಲ್ಲೆಯಲ್ಲಿ 2 ವರ್ಷವಾದರೂ ಆಗದ ಪುನರ್ವಸತಿ

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಕಾಯ್ದೆಯ ಪ್ರಕಾರ 90 ದಿನಗಳಲ್ಲಿ ಪುನರ್ವಸತಿ ಕಲ್ಪಿಸಬೇಕು. ಆದರೆ, ಜಿಲ್ಲೆಯಲ್ಲಿ 2 ವರ್ಷವಾದರೂ ಪುನರ್ವಸತಿ ಹಾಗೂ ಉದ್ಯೋಗ ಕಲ್ಪಿಸಿಲ್ಲ ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಹೇಳಿದ್ದಾರೆ. ಪೌರ ಕಾರ್ಮಿಕರಿಗೆ 381 ಮನೆಗಳನ್ನು ಕಲ್ಪಿಸುವ ಕಾಮಗಾರಿ ಸ್ಥಗಿತಗೊಂಡಿದೆ. ಡಿಸೆಂಬರ್ ಒಳಗೆ ಈ ಕಾಮಗಾರಿ ಪೂರ್ಣಗೊಳಿಸಲು ಗಡುವು ನೀಡಲಾಗಿದೆ ಎಂದವರು ಹೇಳಿದರು.

ಈ ಹಿಂದೆ ಆಯೋಗದ ಅಧ್ಯಕ್ಷರಾಗಿದ್ದ ವೆಂಕಟೇಶ್ ಅವರು ನೀಡಿದ ಕೆಲ ಸೂಚನೆಗಳು ಇನ್ನೂ ಜಾರಿಗೆ ಬರಬೇಕಿದೆ. ಆ ಬಗ್ಗೆಯೂ ಸೂಚನೆ ನೀಡಲಾಗಿದೆ. ಪಾಲಿಕೆ ವತಿಯಿಂದ ಪೌರ ಕಾರ್ಮಿಕರಿಗೆ 15 ದಿನಗಳಲ್ಲಿ ವಿಮೆ ಸೌಲಭ್ಯ ಕಲ್ಪಿಸಲು ಗಡುವು ನೀಡಲಾಗಿದೆ ಎಂದು ಶಿವಣ್ಣ ತಿಳಿಸಿದರು.

### ಕಾಯ್ದೆ ಉಲ್ಲಂಘಿಸಿದರೆ ಸ್ವಯಂ ಪ್ರೇರಿತ ಪ್ರಕರಣ ದಾಖಲು

ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕ ನಿಷೇಧಕ್ಕೆ ಕಾಯ್ದೆ ರೂಪಿಸಲಾಗಿದೆ. ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳೂ ತೀರ್ಪುಗಳನ್ನು ನೀಡಿವೆ. ಇಷ್ಟಾದರೂ ಅಂತಹ ಪದ್ಧತಿ ನಡೆಸುವ ಅಧಿಕಾರಿಗಳ ವಿರುದ್ಧ ಸಫಾಯಿ ಕರ್ಮಚಾರಿಗಳ ಆಯೋಗ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಲಾಗುವುದು ಎಂದು ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಎಚ್ಚರಿಸಿದ್ದಾರೆ.

ಇತ್ತೀಚೆಗಷ್ಟೇ ಹುಬ್ಬಳ್ಳಿಯಲ್ಲಿ ಇಂತಹ ಪ್ರಕರಣದ ವಿರುದ್ಧ ಕ್ರಮ ತಗೆದುಕೊಳ್ಳಲಾಗಿದೆ. ಮಂಡ್ಯದ ಪಾಂಡವಪುರದಲ್ಲಿ ಬಲವಂತವಾಗಿ ಮಹಿಳೆಯೊಬ್ಬರನ್ನು ಮಲದ ಗುಂಡಿಗೆ ಇಳಿಸಿದ ಬಗ್ಗೆಯೂ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದರು.

## ಮಕ್ಕಳಲ್ಲಿ ಕಾಡುತ್ತಿರುವ ಮೆಸ್ಸಿ

(1ನೇ ಪುಟದಿಂದ) ಕೇಂದ್ರದಿಂದಾಗಲೀ ಈವರೆಗೂ ಸರಿಯಾದ ಪ್ರಮಾಣಿತ ನಿರ್ವಹಣಾ ವ್ಯವಸ್ಥೆ ಯನ್ನು (ಎಸ್.ಓ.ಪಿ) ಜಾರಿಗೊಳಿಸಿಲ್ಲ. ಹಿರಿಯರಿಗೆ ನೀಡುವ ಚಿಕಿತ್ಸಾ ಪದ್ಧತಿಯ ಸಮಾನಾಂತರ ಅಂಶಗಳನ್ನೇ ಮಕ್ಕಳ ಚಿಕಿತ್ಸೆಗೂ ಮುಂದುವರೆಸಲಾಗುತ್ತಿದೆ. ಹಾಗಾಗಿ ಕೆಲವು ಮಕ್ಕಳಲ್ಲಿ ಅಡ್ಡ ಪರಿಣಾಮಗಳಾಗಿವೆ ಎಂದು ಹೇಳಲಾಗಿದೆ.

ಮೂರನೆ ಅಲೆ ಮಕ್ಕಳಿಗೆ ತೊಂದರೆಯುಂಟು ಮಾಡಲಿದೆ ಎಂಬ ಆತಂಕವನ್ನು ವ್ಯಾಪಕವಾಗಿ ಬಿತ್ತಲಾಗಿದೆ. ಅದನ್ನು ನಿಭಾಯಿಸಲು ಸರ್ಕಾರ ಸೂಕ್ತ ಸಿದ್ಧತೆಗಳನ್ನು ಕೈಗೊಳ್ಳುತ್ತಿರುವುದಾಗಿಯೂ ಪ್ರಚಾರ ಮಾಡಲಾಗುತ್ತಿದೆ. ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಐಸಿಯು, ಹೆಚ್.ಡಿ.ಯು. ಬೆಡ್‌ಗಳ ಚಿಕಿತ್ಸಾ ಘಟಕಗಳ ಸ್ಥಾಪನೆ, ಮಕ್ಕಳ ತಜ್ಞರ ನಿಯೋಜನೆಯಲ್ಲಿ ಸರ್ಕಾರ ದಾಪುಗಾಲಿಟ್ಟು ತಯಾರಿ ಮಾಡಿಕೊಳ್ಳುತ್ತಿದೆ. ಆದರೆ, ಚಿಕಿತ್ಸೆಗೆ ಪ್ರಮುಖವಾಗಿ ಬೇಕಾದ ಎಸ್‌ಓಪಿಯನ್ನೇ ಪ್ರಕಟಿಸಿಲ್ಲ.

ಕೊರೊನಾ ಹೊಸ ಹೊಸ ಸವಾಲುಗಳನ್ನು ತಂದೊಡ್ಡುತ್ತಿದೆ. ಕೊರೊನಾ 3ನೇ ಅಲೆ, ಡೆಲ್ಟಾ, ಡೆಲ್ಟಾ ಪ್ಲಸ್, ಬ್ಲ್ಯಾಕ್ ಫಂಗಸ್, ಮೆಸ್ಸಿಯಂತಹ ಸಮಸ್ಯೆಗಳು ಜನರನ್ನು ಭಯ ಭೀತರನ್ನಾಗಿ ಮಾಡುತ್ತಿವೆ.

ಆರೋಗ್ಯ ಕ್ಷೇತ್ರಕ್ಕೂ ದೊಡ್ಡ ಸವಾಲಾಗಿದೆ. ಈಗಾಗಲೇ ರಾಜ್ಯದಲ್ಲಿ ಸಾವಿರಾರು ಮಕ್ಕಳು ಕೊರೊನಾ ಸೋಂಕು ತಗುಲಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ಎರಡನೇ ಅಲೆಯ ಬಳಿಕ ಮಕ್ಕಳಲ್ಲಿ ಮೆಸ್ಸಿ ಸಮಸ್ಯೆ ಕಾಣಿಸಿಕೊಳ್ಳುತ್ತಿರುವ ಬಗ್ಗೆ ಪೋಷಕರಲ್ಲಿ ಹೆಚ್ಚು ಜಾಗೃತಿ ಮೂಡಿಸಬೇಕಿದೆ. ಜ್ವರ, ಹೊಟ್ಟೆ, ನೋವು ಸುಸ್ತಿನಂತಹ ರೋಗ ಲಕ್ಷಣ ಗಳನ್ನು ನಿರ್ಲಕ್ಷ್ಯ ಮಾಡದೆ ತಜ್ಞ ವೈದ್ಯರನ್ನು ಸಂಪರ್ಕಿಸುವ ಅಗತ್ಯ ಇದೆ.

## ಹಳೇಬಾತಿಯಲ್ಲಿ ದಾಖಲಾತಿ ಆಂದೋಲನ



ದಾವಣಗೆರೆ, ಜೂ.24 - ಇಲ್ಲಿಗೆ ಸಮೀಪದ ಹಳೇಬಾತಿಯ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ 2021-22 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ದಾಖಲಾತಿ ಆಂದೋಲನ ಅಡಿಯಲ್ಲಿ ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್.ಆರ್. ಸಿದ್ದೇಶ್ ಭಾಗವಹಿಸಿದ್ದರು.

## ಲೋಕಸೇವಾ ಆಯೋಗದ ಸದಸ್ಯರಾಗಿ ಶಾಂತ

(1ನೇ ಪುಟದಿಂದ) ಶಾಮಪ್ಪ ಮೇಸ್ಟ್ರು ಚಳಕೇರಿ ಅವರ ಕಿರಿಯ ಪುತ್ರ ಬಿ.ಎಸ್. ಪುರುಷೋತ್ತಮ್ ಅವರೊಂದಿಗೆ 1994 ರಲ್ಲಿ ವಿವಾಹವಾದ ಡಾ. ಶಾಂತ ಅವರು 2010 - 2013ರ ಸಾಲಿನಲ್ಲಿ ದಾವಣಗೆರೆಯ ಜಜಮು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪೆಥಾಲಜಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಹರಿಹರ ತಾಲ್ಲೂಕು ಕೊಂಡಜ್ಜಿಯ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ದಾವಣಗೆರೆ ತಾಲ್ಲೂಕಿನ ಹೊನ್ನೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ ಡಾ. ಶಾಂತ ಹೊಸಮನಿ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತನಿಧಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಇದೀಗ ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯ ರಕ್ತನಿಧಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಅಭಿನಂದನೆ:** ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿ ನೇಮಕಗೊಂಡಿರುವ ಡಾ. ಶಾಂತ ಹೊಸಮನಿ ಅವರನ್ನು ಹಿರಿಯ ಸಾಹಿತಿ ಶ್ರೀಮತಿ ಬಿ.ಟಿ. ಜಾಹ್ನವಿ ಅಭಿನಂದಿಸಿದ್ದಾರೆ.




## ಜಿಲ್ಲೆಯಲ್ಲಿ ಪಾಸಿಟಿವಿಟಿ ಶೇ.4.27ಕ್ಕೆ ಇಳಿಕೆ

(1ನೇ ಪುಟದಿಂದ) ಹಾಸ್ಟೆಲ್, ಹರಿಹರದಲ್ಲಿ ಶ್ರೀ ಶೈಲ ಮಠದಿಂದ ಒಂದು ಕೋವಿಡ್ ಕೇರ್ ಸೆಂಟರ್, ಅಲ್ಪಸಂಖ್ಯಾತರಿಗಾಗಿ ತಾಜ್ ಪ್ಯಾಲೇಸ್ ಸೇರಿದಂತೆ ತಾಲ್ಲೂಕು ಮಟ್ಟದಲ್ಲೂ ಕೋವಿಡ್ ಕೇರ್ ಸೆಂಟರ್ ಆರಂಭಿಸಿತ್ತು.

ದಿನ ಕಳೆದಂತೆ ಸೋಂಕು ಗ್ರಾಮೀಣ ಭಾಗದಲ್ಲಿಯೂ ಹೆಚ್ಚಾಗಿದ್ದ ರಿಂದ ಅಂಗನವಾಡಿ ಕಾರ್ಯಕರ್ತರು, ಪಿಡಿಓಗಳು, ವೈದ್ಯರು ಸೇರಿದ ಟಾಸ್ಕ್ ಫೋರ್ಸ್ ತಂಡ ರಚಿಸಿ ವೈದ್ಯರ ನಡೆ ಹಳ್ಳಿಯ ಕಡೆ ಎಂಬ ಅಭಿಯಾನ ಆರಂಭಿಸಿ, ಕೋವಿಡ್ ಟೆಸ್ಟ್ ಗುರಿ ಹೆಚ್ಚಿಸಿ, ಸೋಂಕಿತರನ್ನು ಮನವೊಲಿಸಿ ಕೋವಿಡ್ ಕೇರ್ ಸೆಂಟರ್‌ಗಳಿಗೆ ಕರೆತರ ಲಾಗುತ್ತಿತ್ತು. ಈ ಎಲ್ಲಾ ಕಾರಣಗಳಿಂದಾಗಿ 24ಕ್ಕೆ ಇದ್ದ ಪಾಸಿಟಿವಿಟಿ ರೇಟ್ ಇದೀಗ 5.09ಕ್ಕೆ ಇಳಿಕೆಯಾಗಿದೆ.

**ಲಸಿಕೆಯತ್ತ ಹೆಚ್ಚಿನ ಗಮನ:** ಕೋವಿಡ್ ಸೋಂಕಿತರ ಸಂಖ್ಯೆ ಇಳಿಕೆಯಾಗಿದ್ದು, ಇದೀಗ ಲಸಿಕೆ ಹಾಕಿಸುವತ್ತ ಗಮನ ಹರಿಸಲಾಗುತ್ತಿದೆ ಎಂದು ಜಿಲ್ಲಾ ವೈದ್ಯಾಧಿಕಾರಿ ನಾಗರಾಜ್ ತಿಳಿಸಿದ್ದಾರೆ.

ಸರ್ಕಾರ 18 ರಿಂದ 44 ವರ್ಷ ವಯೋಮಿತಿಯವರಿಗೂ ಲಸಿಕೆ ನೀಡಲು ಆದೇಶಿಸಿದ್ದು, ಅದರಂತೆ ಎಲ್ಲರೂ ಲಸಿಕೆ ಪಡೆಯುತ್ತಿದ್ದಾರೆ. ಜಿಲ್ಲೆಯಲ್ಲಿ ಈ ವರೆಗೆ 4.83 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ. ಸೋಮ ವಾರ ಒಂದೇ ದಿನ ಅತಿ ಹೆಚ್ಚು ಅಂದರೆ 28,123 ಜನರಿಗೆ ಲಸಿಕೆ ನೀಡಲಾಗಿತ್ತು. ಅದಕ್ಕಿಂತ ಮೊದಲು ಜೂ.12ರ ಶನಿವಾರ 15 ಸಾವಿರ ಜನರಿಗೆ ಲಸಿಕೆ ನೀಡಲಾಗಿತ್ತು ಎಂದವರು ಹೇಳಿದರು.

ಸರ್ಕಾರದಿಂದ ಹೆಚ್ಚು ಲಸಿಕೆ ಬಂದರೆ ನಾವು ಜನತೆಗೆ ಹೆಚ್ಚು ಲಸಿಕೆ ಕೊಡಲು ರೆಡಿಯಾಗಿದ್ದೇವೆ. ಲಸಿಕೆಯಿಂದ ಸಮುದಾಯದಲ್ಲಿ ಸೋಂಕು ನಿರೋಧಕ ಶಕ್ತಿ ಹೆಚ್ಚಾಗುತ್ತದೆ ಎಂದರು.

ಪ್ಯಾಕೇಜಿಂಗ್ ಬ್ಯಾಗ್ ತಯಾರಿಕಾ ಘಟಕದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ

| ಕೆಲಸ | ಸಂಖ್ಯೆಗಳು |
|---|---|
| ಪ್ರಿಂಟಿಂಗ್ ಆಪರೇಟರ್ | 02 |
| ಆಫೀಸ್ ಬಾಯ್ | 01 |
| ಸಹಾಯಕ ಕೆಲಸಗಾರ (HELPER) | 04 |

ಅನುಭವ ಉಳ್ಳವರಿಗೆ ಮೊದಲ ಆದ್ಯತೆ

Visit With Your Resume

CONTACT 9845379555

ಕೂಡಲೇ ಸಂಪರ್ಕಿಸಿ

JAIN POLY PACKS
Plot No : 15, KIADB, Karur Industrial Area, Textile Park
DAVANAGERE-577005. KARNATAKA
E-mail : jainpolypacks555@gmail.com

# ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿ



## ಜಗಳೂರು ಶಾಸಕ ರಾಮಚಂದ್ರ ಕರೆ

ಜಗಳೂರು, ಜೂ.24- ಪೋಷಕರು ಖಾಸಗಿ ಶಾಲೆಗಳ ಮೊರೆ ಹೋಗಿ ಆರ್ಥಿಕ ಹೊರೆ ಮಾಡಿಕೊಳ್ಳದೆ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ, ಉಚಿತ ಶೈಕ್ಷಣಿಕ ಸೌಲಭ್ಯ ಕೊಡಿಸಲು ಮುಂದಾಗಿ ಎಂದು ಶಾಸಕ ಎಸ್.ವಿ. ರಾಮಚಂದ್ರ ಕರೆ ನೀಡಿದರು.

ನಿಂಗನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಆವರಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕ್ಷೇತ್ರ ಸಮನ್ವಯ ಅಧಿಕಾರಿಗಳ ಕಛೇರಿ ಸಂಯುಕ್ತಾಶ್ರಯ ದಲ್ಲಿ ಪೋಷಕರು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ತಪ್ಪದೇ ಸೇರಿಸಿ ಎಂಬ ದಾಖಲಾತಿ ಆಂದೋಲನದ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಭವಿಷ್ಯದ ನಾಯಕರು ಹುಟ್ಟುವಂತಹ ಶಕ್ತಿಯಿರುವುದೇ ಸರ್ಕಾರಿ ಶಾಲೆಗಳಲ್ಲಿ. ಸರ್ಕಾರ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಜೊತೆಗೆ ಊಟ, ವಸತಿ, ಪುಸ್ತಕ, ಬಟ್ಟೆ, ಸೈಕಲ್ ಸೇರಿದಂತೆ ಅನೇಕ ಸೌಲಭ್ಯಗಳನ್ನು ನೀಡಿ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿದೆ. ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ತಪ್ಪದೇ ಸೇರಿಸಿ ಎಂದು ಮನವಿ ಮಾಡಿದರು.

ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಮಂಜಪ್ಪ ದಿದ್ದಿಗಿ ಮಾತನಾಡಿ, ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ದಾಖಲಾತಿ ಪ್ರಾರಂಭವಾಗಿದ್ದು, ಕೊರೊನಾ ಮಧ್ಯದಲ್ಲಿಯೂ ಸಹ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲಾಗಿದೆ ಎಂದರು.

ಬಿಜೆಪಿ ಮಂಡಲ ಅಧ್ಯಕ್ಷ ಮಹೇಶ್, ದಾವಣಗೆರೆ ವಿವಿ ಸೆನೆಟ್ ಸದಸ್ಯ ಕೃಷ್ಣಮೂರ್ತಿ, ಜಿ.ಪಂ. ಮಾಜಿ ಸದಸ್ಯ ಹೆಚ್. ನಾಗರಾಜ್, ಗ್ರಾ.ಪಂ. ಅಧ್ಯಕ್ಷೆ ಚೌಡಮ್ಮ, ಗ್ರಾ.ಪಂ. ಮಾಜಿ ಅಧ್ಯಕ್ಷ ಮಂಜಣ್ಣ, ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ್, ಗ್ರಾ.ಪಂ. ಸದಸ್ಯೆ ರೂಪಾ, ಶಾಲಾ ಮುಖ್ಯ ಶಿಕ್ಷಕ ಪ್ರಕಾಶ್, ಶಿಕ್ಷಕರಾದ ಹುಸೇನ್ ಷರೀಫ್, ಹನುಮಕ್ಕ, ಭವ್ಯ, ಗ್ರಾಮದ ಮುಖಂಡರಾದ ರವಿ, ಓಬಣ್ಣ ಸಮಾರಂಭದಲ್ಲಿದ್ದರು.

# ಎಲ್ಲಮ್ಮ ಬಡಾವಣೆಯ ಅಭಿವೃದ್ಧಿಗೆ 30 ಲಕ್ಷ ಹಣ ತೆಗೆದಿರಿಸಲು ಆಯುಕ್ತರಿಗೆ ಶಾಸಕರ ನಿರ್ದೇಶನ



## ಹರಿಹರ

ಹರಿಹರ, ಜೂ.24- ನಗರದ ಎಲ್ಲಮ್ಮ ಬಡಾವಣೆಯ ಅಭಿವೃದ್ಧಿಗೆ ನಗರಸಭೆ ವತಿಯಿಂದ ರಸ್ತೆ, ಕುಡಿಯುವ ನೀರು, ಚರಂಡಿ ನಿರ್ಮಾಣ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 30 ಲಕ್ಷ ರೂ. ಹಣವನ್ನು ತೆಗೆದಿರಿಸಲು ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ ಅವರಿಗೆ ಶಾಸಕ ಎಸ್. ರಾಮಪ್ಪ ಅವರು ನಿರ್ದೇಶಿಸಿದ್ದಾರೆ.

ಶಾಸಕ ಎಸ್.ರಾಮಪ್ಪ ನಗರದಲ್ಲಿನ ಎಲ್ಲಮ್ಮ ಬಡಾವಣೆಯ ಸುತ್ತಮುತ್ತಲಿನ ಪ್ರದೇಶವನ್ನು ಪರಿಶೀಲನೆ ನಡೆಸಿ ನಂತರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದರು.

ಎಲ್ಲಮ್ಮ ಬಡಾವಣೆಯಲ್ಲಿ 100 ಕ್ಕೂ ಹೆಚ್ಚು ಮನೆಗಳು ಇದ್ದು, ಸುಮಾರು 400 ಕ್ಕೂ ಹೆಚ್ಚು ಜನರು ವಾಸಿಸುತ್ತಿದ್ದಾರೆ. ಆದರೆ, ನಗರಸಭೆಯಿಂದಾಗಲೀ ಅಥವಾ ಗುತ್ತೂರು ಗ್ರಾಮ ಪಂಚಾಯತಿ ವತಿಯಿಂದಾಗಲೀ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವುದರಿಂದ ಜನರ ಬದುಕು ದುಸ್ತರವಾಗಿರುವ ಬಗ್ಗೆ ಶಾಸಕರು ಆಯುಕ್ತರಿಗೆ ವಿವರಿಸಿದರು.

ಪೌರಾಯುಕ್ತರಾದ ಲಕ್ಷ್ಮೀ ಮಾತನಾಡಿ, ನಗರಸಭೆ ವ್ಯಾಪ್ತಿಗೆ ಈ ಬಡಾವಣೆಯನ್ನು ಸೇರ್ಪಡೆ ಮಾಡಲಾಗಿದೆ. ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ತಮಗೆ ಯಾವುದೇ ರೀತಿಯ ಆದೇಶ ಸರ್ಕಾರದಿಂದ ಬರದೇ ಇರುವುದರಿಂದ ಇಲ್ಲಿನ ಜನತೆಗೆ ನಗರಸಭೆ ವತಿಯಿಂದ ಹಣವನ್ನು ಬಳಕೆ ಮಾಡುವುದಕ್ಕೆ ಬರುವುದಿಲ್ಲ. ಗುತ್ತೂರು ಗ್ರಾಮ ಪಂಚಾಯತಿ ವತಿಯಿಂದ ಮಾತ್ರ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಅಧಿಕಾರ ಇದೆ. ಆದರೆ, ನಗರಸಭೆಯಿಂದ ಈ ಭಾಗದಲ್ಲಿ ಯುಜಿಡಿ ಕಾಮಗಾರಿ ನಡೆಯುತ್ತಿದೆ ಎಂದು ಹೇಳಿದರು.

ಸ್ಥಳೀಯ ನಿವಾಸಿ, ನಿವೃತ್ತ ಸೈನಿಕ ಮಂಜುನಾಥ್ ಮಾತನಾಡಿ, ಶುದ್ಧವಾದ ಕುಡಿಯುವ ನೀರು, ರಸ್ತೆ, ಚರಂಡಿ, ವಿದ್ಯುತ್ ಪೂರೈಕೆ ಸೇರಿದಂತೆ, ಯಾವುದೇ ರೀತಿಯ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಒದಗಿಸದಿರುವ ಬಗ್ಗೆ ಕಿಡಿಕಾರಿದರು.

ಸ್ಥಳೀಯ ನಿವಾಸಿಗಳು ಮಾತನಾಡಿ, ನಮ್ಮ ಬಡಾವಣೆಯಲ್ಲಿ ಬೋರ್ ವೆಲ್ ಮೂಲಕ ನೀರನ್ನು ಪ್ರತಿದಿನ ಅರ್ಧ ಗಂಟೆ ಮಾತ್ರ ಬಿಡುತ್ತಾರೆ. ಆದರೆ ಸೀಮೆಎಣ್ಣೆ ಮಿಕ್ಸ್ ನೀರು ಬರುತ್ತಿದೆ ಎಂದು ದೂರಿದರು.

ಗುತ್ತೂರು ಪಿಡಿಒ ವಿಜಯಲಕ್ಷ್ಮಿ ಅವರಿಗೆ ಸ್ಥಳಕ್ಕೆ ಆಗಮಿಸುವಂತೆ ಶಾಸಕರು ಸೂಚಿಸಿದರೂ ವಿಜಯಲಕ್ಷ್ಮಿ ಸ್ಥಳಕ್ಕೆ ಆಗಮಿಸದಿರುವ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಎಇಇ ಬಿರಾದಾರ್, ಗುತ್ತೂರು ವಿ.ಎ. ಪ್ರಭು, ನಾಗರಾಜಪ್ಪ ಸ್ಥಳೀಯ ನಿವಾಸಿಗಳು ಹಾಜರಿದ್ದರು.

# ಕುಂಚ ಬ್ರಹ್ಮ ಪ್ರೊ. ಬಿ.ಆರ್.ಕೊರ್ತಿ ನಿಧನ



ದಾವಣಗೆರೆ, ಜೂ. 24- ಕುಂಚ ಬ್ರಹ್ಮ ಎಂದೇ ಹೆಸರಾಗಿದ್ದ ಪ್ರೊ.ಬಿ.ಆರ್.ಕೊರ್ತಿ ಅವರು ಇಂದು ನಿಧನರಾದರು.

ಹೃದಯ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಪತ್ನಿ, ಓರ್ವ ಮಗಳು, ಇಬ್ಬರು ಪುತ್ರರನ್ನು ಅವರು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ಇಂದು ರಾತ್ರಿ ನಗರಕ್ಕೆ ತರಲಾಗುತ್ತಿದ್ದು, ಶ್ರೀನಿವಾಸ ನಗರದಲ್ಲಿನ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುತ್ತದೆ. ನಾಳೆ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಶಾಮನೂರಿನ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನಡೆಯಲಿದೆ.

ವಿಜಯಪುರದಲ್ಲಿ 1944 ರಲ್ಲಿ ಜನಿಸಿದ್ದ ಅವರು ಲಲಿತ ಕಲೆಯಲ್ಲಿ ಎಂ.ಎ. ಪದವಿ ಪಡೆದಿದ್ದರು.

**ಶ್ರದ್ಧಾಂಜಲಿ :** ಬಿ.ಆರ್. ಕೊರ್ತಿ ಅವರ ನಿಧನಕ್ಕೆ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಪ್ರೊ. ಎಸ್.ಬಿ. ರಂಗನಾಥ್ ಶೋಕ ವ್ಯಕ್ತಪಡಿಸಿದ್ದಾರೆ.

ಅಭಿಜಾತ ಕಲಾವಿದರಾಗಿದ್ದ ಕೊರ್ತಿ ಅವರ ಅಪರೂಪದ ಜಲ ವರ್ಣ ಕೃತಿಗಳು ಕಲಾ ವಿಮರ್ಶಕರ ಮನ ಗೆದ್ದಿದ್ದವು. ಅತ್ಯಂತ ಸರಳ - ಸೌಜನ್ಯ ಕಲಾವಿನ ಕಣ್ಮರೆಯಿಂದ ಚಿತ್ರ ಕಲಾ ಕ್ಷೇತ್ರ ಬಡವಾಯಿತು ಎಂದು ಅವರು ಕಂಬನಿ ಮಿಡಿದಿದ್ದಾರೆ.

ಹಿರಿಯ ಕಲಾವಿದ ಕೊರ್ತಿ ಅವರ ನಿಧನಕ್ಕೆ ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್, ರಾಜ್ಯದ ಹಿರಿಯ ಚಿತ್ರ ಕಲಾವಿದರಾದ ದಾವಣಗೆರೆ ಮೂಲದ ಶ್ರೀಮತಿ ಸುಲೋಚನಾ ವೇಣು ಗೋಪಾಲ್ ತೀವ್ರ ಶೋಕ ವ್ಯಕ್ತ ಪಡಿಸಿದ್ದಾರೆ.

ಬಿ.ಆರ್.ಕೊರ್ತಿ ಅವರ ನಿಧನಕ್ಕೆ ಕಲಾ ಪರಿಷತ್ತಿನ ಗೌರವ ಕಾರ್ಯದರ್ಶಿ ಎ.ಮಹಾಲಿಂಗಪ್ಪ ಅವರು ಸಂತಾಪ ಸೂಚಿಸಿದ್ದಾರೆ. ದಾವಣಗೆರೆಯು ಹೆಮ್ಮೆಯ ಹಾಗೂ ಹಿರಿಯ ಕಲಾವಿದನನ್ನು ಕಳೆದು ಕೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಕೊರ್ತಿ ಅವರ ಅಗಲುವಿಕೆ ಕುಂಚ ಕಲಾ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಯಕ್ಷಗಾನ ಕಲಾವಿದ ಕೆ.ರಾಘವೇಂದ್ರ ನಾಯರಿ ಹೇಳಿದ್ದಾರೆ.

## ಕೇಂದ್ರದಿಂದ ಅನುದಾನ ತಾರತಮ್ಯ : ನಗರದಲ್ಲಿ ಇಂದು ಜೆಡಿಎಸ್ ಪ್ರತಿಭಟನೆ

ಕೇಂದ್ರ ಸರ್ಕಾರ ರಾಜ್ಯಕ್ಕೆ ಅನುದಾನ ನೀಡುವಲ್ಲಿ ಮಾಡಿರುವ ತಾರತಮ್ಯ ಹಾಗೂ ಕೇಂದ್ರ, ರಾಜ್ಯಗಳೆರಡೂ ಕೊರೊನಾ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಸೂಕ್ತವಾಗಿ ಸ್ಪಂದಿಸದೇ ಇರುವುದನ್ನು ಖಂಡಿಸಿ, ಜಿಲ್ಲಾ ಜೆಡಿಎಸ್‌ನಿಂದ ಇಂದು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಮತ್ತು 28 ರವರೆಗೆ ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಜಿಲ್ಲಾ ಮಹಾಪ್ರಧಾನ ಕಾರ್ಯದರ್ಶಿ ಜೆ.ಅಮಾನುಲ್ಲಾ ಖಾನ್ ತಿಳಿಸಿದ್ದಾರೆ.

## ಪ್ರೊ. ಹೆಚ್. ನಾಗರಾಜ ಕರ್ನಾಟಕ ವಿವಿ ಕುಲ ಸಚಿವ




ಹರಪನಹಳ್ಳಿ, ಜೂ.24- ಕರ್ನಾಟಕ ವಿಶ್ವವಿದ್ಯಾನಿಲಯದ ಮೌಲ್ಯಮಾಪನ ಕುಲಸಚಿವರಾಗಿ ತಾಲ್ಲೂಕಿನ ಅರಸನಾಳು ಗ್ರಾಮದ ಪ್ರೊ. ಎಚ್. ನಾಗರಾಜ ನೇಮಕಗೊಂಡಿದ್ದಾರೆ.

ನಾಗರಾಜ್ ಮೈಸೂರು ವಿವಿಯ ಭೂಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಧಾರವಾಡ ಕರ್ನಾಟಕ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿರುವ ಅವರು, ಅದೇ ವಿವಿಯ ಕುಲಸಚಿವರಾಗಿ ಇಂದು ಅಧಿಕಾರ ಸ್ವೀಕರಿಸಿದರು.

# 22 ಕೆರೆಗಳಿಗೆ ನೀರು ಹರಿಸಲು ಸರ್ವಪ್ರಯತ್ನ



ದಾವಣಗೆರೆ, ಜೂ.24- 22 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆ ಒಂದಿಲ್ಲೊಂದು ಕಾರಣಗಳಿಂದಾಗಿ ಹಿನ್ನಡೆ ಅನುಭವಿಸುತ್ತಾ ಸಾಗಿದ್ದು ಈಗ ಇತಿಹಾಸ. ಈ ಎಲ್ಲಾ ಅಡೆತಡೆಗಳನ್ನು ಪರಿಹರಿಸಿಕೊಂಡು 22 ಕೆರೆಗಳಿಗೆ ನೀರು ಹರಿಸಲು ಸರ್ವ ರೀತಿಯ ಪ್ರಯತ್ನ ಮಾಡಲಾಗುವುದು ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಭರವಸೆ ನೀಡಿದ್ದಾರೆ.

22 ಕೆರೆಗಳ ಏತ ನೀರಾವರಿ ಯೋಜನೆಯ ಪೈಪ್‌ಲೈನ್ ಸ್ಥಳಾಂತರ ಮಾಡುವ ಕಾಮಗಾರಿಯ ಪ್ರಗತಿಯನ್ನು ನೀರಾವರಿ ಇಲಾಖೆಯ ಇಂಜಿನಿಯರ್‌ಗಳಿಂದ ಪಡೆದು ಮಾತನಾಡಿದರು.

ಈ ಹಿಂದೆ ರಾಷ್ಟ್ರೀಯ ಹೆದ್ದಾರಿಯ ಸರ್ವೀಸ್ ರಸ್ತೆಯ ಕೆಳಗಡೆ ಸುಮಾರು 8 ಕಿ.ಮೀ ಏತ ನೀರಾವರಿ ಯೋಜನೆಯ ಪೈಪ್‌ಲೈನನ್ನು ಅಳವಡಿಸಲಾಗಿತ್ತು, ಸದರಿ ಪೈಪ್‌ಲೈನನ್ನು ಈಗ ಸರ್ವೀಸ್ ರಸ್ತೆಯ ಪಕ್ಕಕ್ಕೆ ಸಂಪೂರ್ಣವಾಗಿ ಸ್ಥಳಾಂತರಿಸಲಾಗಿದೆ. ಅದೇ ರೀತಿ ತುಂಗಭದ್ರಾ ನದಿಯಿಂದ ನೀರೆತ್ತುವ ಸಂದರ್ಭದಲ್ಲಿ ಪದೇ ಪದೇ ಪೈಪ್‌ಲೈನ್ ಒಡೆದು ನೀರೆತ್ತಲು ಅಡಚಣೆಯುಂಟಾಗುತ್ತಿತ್ತು. ಸಾಕಷ್ಟು ನುರಿತ ತಜ್ಞರನ್ನು ಕರೆಸಿ ಇದಕ್ಕೆ ಪರಿಹಾರ ಕಂಡುಕೊಳ್ಳಲಾಗಿದ್ದರೂ ಕೂಡ ಸಮಸ್ಯೆ ತಾರ್ಕಿಕ ಅಂತ್ಯ ಕಂಡಿರಲಿಲ್ಲ. ಈಗ 8 ಕಿ.ಮೀ. ಪೈಪ್‌ಲೈನ್ ಸ್ಥಳಾಂತರ ಮಾಡಿ ತಜ್ಞರ ಸಲಹೆಯಂತೆ ರಾಜನಹಳ್ಳಿ ಜಾಕ್‌ವೆಲ್‌ನಿಂದ ದಾವಣಗೆರೆವರೆಗೆ ಸುಮಾರು 1 ಕಿ.ಮೀ ಗೆ ಒಂದರಂತೆ 20 ಏರ್‌ವಾಲ್ವ್‌ಗಳನ್ನು ಅಳವಡಿಸಲಾಗಿದೆ. ನಿನ್ನೆ ಸಂಜೆಯಿಂದ ಪ್ರಾಯೋಗಿಕವಾಗಿ ಒಂದು ಮೋಟಾರು ಮೂಲಕ ನದಿಯಿಂದ ನೀರೆತ್ತಲು ಪ್ರಾರಂಭಿಸಿದ್ದು, ನೀರು ಸರಾಗವಾಗಿ ಹರಿದ ನಂತರ ಉಳಿದ ಮೋಟಾರ್‌ಗಳ ಮೂಲಕ ನೀರೆತ್ತಲು ಆರಂಭಿಸಲಾಗುವುದು ಎಂದರು.

ಕಳೆದ ಬಾರಿ ಈ ರೀತಿಯ ಅಡಚಣೆಯಿಂದ ಮಳೆಗಾಲ ಪೂರ್ತಿ ಕೆರೆಗಳಿಗೆ ನೀರು ಹರಿಸಲು ಸಾಧ್ಯವಾಗಿರಲಿಲ್ಲ. ಈ ಬಾರಿ ಆ ರೀತಿ ಆಗಬಾರದು ಎಂದು ಶೀಘ್ರವಾಗಿ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದೆ. ಒಟ್ಟಾರೆಯಾಗಿ ಸಿರಿಗೆರೆ ಗುರುಗಳ ಆಶಯದಂತೆ ಹಾಗೂ ಮಾಯಕೊಂಡ, ಜಗಳೂರು ಕ್ಷೇತ್ರಗಳ ರೈತರ ಅಭಿಲಾಷೆಯಂತೆ ಕೆರೆಗಳಿಗೆ ನೀರು ಹರಿಸಲು ಎಲ್ಲಾ ರೀತಿಯಿಂದಲೂ ಪ್ರಯತ್ನಿಸಲಾಗುವುದು.

ಕರ್ನಾಟಕ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಮಲ್ಲಪ್ಪ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರಯ್ಯ ಹಾಗೂ ಗಂಗಪ್ಪ ಸಂಸದರಿಗೆ ಕೈಗೊಂಡಿರುವ ಕೆಲಸದ ಬಗ್ಗೆ ಮಾಹಿತಿ ಒದಗಿಸಿದರು.

# ಅಕ್ರಮವಾಗಿ ಸಂಗ್ರಹಿಸಿದ್ದ 130.50 ಕ್ವಿಂಟಾಲ್ ಅಕ್ಕಿ ವಶ

## ಪ್ರತ್ಯೇಕ ಎರಡು ಗೋದಾಮುಗಳ ಮೇಲೆ ದಾಳಿ

ದಾವಣಗೆರೆ, ಜೂ.24- ಅಕ್ರಮವಾಗಿ ಪಡಿತರ ಸಂಗ್ರಹದ ಪ್ರತ್ಯೇಕ ಎರಡು ಗೋದಾಮುಗಳ ಮೇಲೆ ಇಲ್ಲಿನ ಆಜಾದ್ ನಗರ ಪೊಲೀಸರು ಇಂದು ದಾಳಿ ಮಾಡಿ, ಒಟ್ಟು 130.50 ಕ್ವಿಂಟಾಲ್ ಅಕ್ಕಿ ವಶಕ್ಕೆ ಪಡೆದಿದ್ದಾರೆ.

ಈ ಸಂದರ್ಭದಲ್ಲಿ ಅಬು ಎಂಬಾತನಿಂದ 67 ಕ್ವಿಂಟಾಲ್, ಜಯಣ್ಣನಿಂದ 63 ಕ್ವಿಂಟಾಲ್ ಅಕ್ಕಿಯನ್ನು ವಶಪಡಿಸಿಕೊಂಡು, ಅವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ.

ಆರೋಪಿಗಳು ಜನರಿಂದ ಕಡಿಮೆ ಬೆಲೆಯಲ್ಲಿ ಅಕ್ಕಿ ಖರೀದಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂಬ ಅಂಶ ಗಮನಕ್ಕೆ ಬಂದಿದ್ದು, ಈ ಪ್ರಕರಣದಲ್ಲಿ ಗೋದಾಮು ಮಾಲೀಕರ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಅವರು ವಿವರಿಸಿದ್ದಾರೆ.

ಡಿಸಿಆರ್‌ಬಿ ಘಟಕದ ಡಿವೈಎಸ್ಪಿ ಬಿ.ಎಸ್. ಬಸವರಾಜ್, ಆಹಾರ ನಿರೀಕ್ಷಕ ಶಿವಮೂರ್ತಿ ಹಿಪ್ಪರಗಿ, ಆಜಾದ್ ನಗರ ಠಾಣೆಯ ಪಿಎಸ್ ಶೈಲಜಾ ಮತ್ತು ಸಿಬ್ಬಂದಿಯನ್ನೊಳಗೊಂಡ ತಂಡವು ಅಕ್ರಮ ಪಡಿತರ ಅಕ್ಕಿ ದಾಸ್ತಾನು ಪತ್ತೆ ಮಾಡಿದೆ.



## ಆರದ ಬೀದಿ ದೀಪ

ಹರಿಹರ, ಜೂ.24- ನಗರದ ಹಲವು ಬಡಾವಣೆಗಳಲ್ಲಿ ವಿದ್ಯುತ್ ದೀಪಗಳು ಮಧ್ಯಾಹ್ನವಾದರೂ ಉರಿಯುತ್ತಿರುತ್ತವೆ. ಬೆಸ್ಕಾಂನವರು ಇದರತ್ತ ಗಮನಹರಿಸಲಿ ಎಂಬುದು ನಾಗರಿಕರ ಆಶಯ.

## ದಾವಣಗೆರೆ ಕ್ಲಬ್ ಸದಸ್ಯರಿಗೆ ಇಂದು ಲಸಿಕೆ

ದಾವಣಗೆರೆ ಕ್ಲಬ್ ವತಿಯಿಂದ ಕ್ಲಬ್‌ನ ಆವರಣದಲ್ಲಿ ಇಂದು ಬೆಳಿಗ್ಗೆ 9 ರಿಂದ 1 ರವರೆಗೆ 18 ವರ್ಷ ಮೇಲ್ಪಟ್ಟವರಿಗೆ ಉಚಿತ ಕೋವಿಡ್ ಲಸಿಕೆ ಕಾರ್ಯಕ್ರಮ ನಡೆಯಲಿದೆ. ಸದಸ್ಯರು ಮತ್ತು ಕುಟುಂಬದವರು ಆಧಾರ್ ಕಾರ್ಡ್‌ನೊಂದಿಗೆ ಆಗಮಿಸಿ, ಲಸಿಕೆ ಪಡೆದುಕೊಳ್ಳಬಹುದು.

## ಭೀಮಾಚಾರ್ ಹೆಚ್. ನಿಧನ



ದಾವಣಗೆರೆ, ಯಲ್ಲಮ್ಮ ನಗರ ನಿವಾಸಿ

**ಭೀಮಾಚಾರ್ ಹೆಚ್. ಬಿನ್ ಹನುಮಂತಾಚಾರ್**

ಇವರು ದಿನಾಂಕ 23.06.2021 ರ ಬೆಳಿಗ್ಗೆ ನಿಧನರಾಗಿರುತ್ತಾರೆ.

ಅಂತ್ಯಕ್ರಿಯೆಯನ್ನು ನಗರದ ವೈಕುಂಠ ಧಾಮದಲ್ಲಿ ಸಂಜೆ 7:30 ಕ್ಕೆ ನೆರವೇರಿಸಲಾಯಿತು.

ಇಂತಿ ದುಃಖತಪ್ತ :

**ಪರಮೇಶ್ವರಚಾರ್, ಬಸವರಾಜ್ ಆಚಾರ್ ಜಯಚಾರ್, ಚಿದಾನಂದ್, ಮೌನೇಶ್ ಮತ್ತು ಕುಟುಂಬ**

## ರಾಜ್ಯದಲ್ಲಿ ಸೋಂಕಿತರ ಸಂಖ್ಯೆ 4 ಸಾವಿರಕ್ಕೂ ಕಡಿಮೆ

ಬೆಂಗಳೂರು, ಜೂ.24 – ರಾಜ್ಯದಲ್ಲಿ ಗುರುವಾರ 3,979 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 138 ಜನ ಸೋಂಕಿನಿಂದ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಗುರುವಾರ 9,768 ಜನ ಸೋಂಕಿನಿಂದ ಗುಣಮುಖರಾಗಿದ್ದಾರೆ. ಹೊಸ ಸೋಂಕಿತರಲ್ಲಿ ಬೆಂಗಳೂರು ನಗರದವರು 969 ಆಗಿದ್ದು, 14ಜನ ಸಾವನ್ನಪ್ಪಿದ್ದಾರೆ.

ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಈಗ 1.10 ಲಕ್ಷವಾಗಿದೆ.

ರಾಜ್ಯದಲ್ಲಿ ನಡೆಸಲಾದ ಕೊರೊನಾ ಟೆಸ್ಟ್‌ಗಳಲ್ಲಿ ಪಾಸಿಟಿವ್ ದರ ಶೇ.2.46 ಆಗಿದ್ದರೆ, ಸಾವುಗಳ ಪ್ರಮಾಣ ಶೇ.3.46 ಆಗಿದೆ.


॥ ಶ್ರೀ ದೇವಗಿರಿ ಮಲ್ಲೇಶ್ವರ ಪ್ರಸನ್ನ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ಎಸ್.ಎಸ್. ಬಡಾವಣೆ ಎ ಬ್ಲಾಕ್, ದಾವಣಗೆರೆ ವಾಸಿಯಾದ

ಪ್ರಭುಲಿಂಗ ಮತ್ತಿಹಳ್ಳಿ (ತರಗಾರ ಮೇಸ್ತ್ರಿ) ಮತ್ತು ಸಹೋದರರು

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 18.06.2021ನೇ ಶುಕ್ರವಾರ ನಮ್ಮ ಪೂಜ್ಯ ತಮ್ಮನಾದ

**ನಾಗರಾಜ ಮತ್ತಿಹಳ್ಳಿ**

ತರಗಾರ ಮೇಸ್ತ್ರಿ, ದಾವಣಗೆರೆ.

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

"ಕೈಲಾಸ ಶಿವಗಣಾರಾಧನೆ'ಯನ್ನು

ದಿನಾಂಕ : 26.06.2021ರ ಶನಿವಾರ ಬೆಳಿಗ್ಗೆ 12.00 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಪ್ರಭುಲಿಂಗ ಮತ್ತಿಹಳ್ಳಿ, ತರಗಾರ ಮೇಸ್ತ್ರಿ ಹಾಗೂ ಸಹೋದರರು, ಚಿದಾನಂದ ಮತ್ತಿಹಳ್ಳಿ ಹಾಗೂ ಪರಿವಾರ ದಿ॥ ಮಲ್ಲೇಶಪ್ಪ ಮತ್ತಿಹಳ್ಳಿ, ಶ್ರೀಮತಿ ಗೌರಮ್ಮ ಮತ್ತಿಹಳ್ಳಿ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು.



॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥ ॥ಶ್ರೀ ಹುಚ್ಚಂಗೆಮ್ಮ ದೇವಿ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ

**ಮಾಳಿಗೇರ ಶ್ರೀ ಶೇಖರಪ್ಪ ಎಂ.ಆರ್. ಮತ್ತು ಮಕ್ಕಳು, ಸಹೋದರ**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 17.06.2021ರಂದು ಗುರುವಾರ ಬೆಳಿಗ್ಗೆ 9.10ಕ್ಕೆ ನನ್ನ ಅಣ್ಣನಾದ

**ಮಾಳಿಗೇರ ಶ್ರೀ ಹನುಮಂತಪ್ಪ ಎಂ.ಆರ್.**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ

'ಕೈಲಾಸ ಸಮಾರಾಧನೆ'ಯನ್ನು

ದಿನಾಂಕ : 25.06.2021ನೇ ಶುಕ್ರವಾರ ಮಧ್ಯಾಹ್ನ 12.00ಕ್ಕೆ ಹಳೇಬಾತಿಯ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

+ ಮಾಳಿಗೇರ ಶ್ರೀಮತಿ ರಾಜೇಶ್ವರಿ ಎಂ.ಜಿ. ಮತ್ತು ಮಕ್ಕಳು, ಹಳೇಬಾತಿ.
+ ಶ್ರೀಮತಿ ಮಾಳಿಗೇರ ಸಿದ್ದಮ್ಮ ಕೋಂ. ಶ್ರೀ ಎಂ.ಆರ್. ರವಿ, ಹಳೇಬಾತಿ.
+ ಶ್ರೀಮತಿ ಮಾಳಿಗೇರ ಶಿವಮ್ಮ ಕೋಂ. ಶ್ರೀ ಎಂ.ಎಸ್. ಮಹಾದೇವಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಹಳೇಬಾತಿ .
+ ಶ್ರೀಮತಿ ಸೌಭಾಗ್ಯಮ್ಮ ಕೋಂ ಕಡೂರು ಶಿವಪ್ಪ ಮತ್ತು ಮಕ್ಕಳು ಹಳೇಬಾತಿ.
+ ಶ್ರೀಮತಿ ರೇಣುಕಮ್ಮ ಕೋಂ ಸದಾನಂದಪ್ಪ ಮತ್ತು ಮಕ್ಕಳು, ಸಹೋದರರು, ಎಳೆಹೊಳೆ.
+ ಶ್ರೀಮತಿ ಗದಿಗೆಮ್ಮ ಕೋಂ ಕಡೂರು ಹನುಮಂತಪ್ಪ ಮಕ್ಕಳು, ಮೊಮ್ಮಕ್ಕಳು, ಹಳೇಬಾತಿ.
+ ಶ್ರೀಮತಿ ಹನುಮಕ್ಕ ಕೋಂ ನೀಲಕಂಠಪ್ಪ ಮತ್ತು ಮಕ್ಕಳು, ಕಡೂರು.
+ ಶ್ರೀಮತಿ ಸಿದ್ದಮ್ಮ ಕೋಂ ದಿ॥ ಕಡೂರು ಹನುಮಂತಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಹಳೇಬಾತಿ ಗುಡ್ಡದ ಕ್ಯಾಂಪ್
+ ಶ್ರೀಮತಿ ಸೋಂಪಮ್ಮ ಕೋಂ ಸಿದ್ದಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಪರ್ವತಸಿದ್ದಗೇರಿ.
+ ಶ್ರೀಮತಿ ಶಾಂತಮ್ಮ ಕೋಂ ಹನುಮಂತಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಕಮದೋಡು.
+ ಶ್ರೀಮತಿ ಜಯಮ್ಮ ಕೋಂ ದಿ॥ ರಾಮಪ್ಪ ಮತ್ತು ಮಕ್ಕಳು, ಕಮದೋಡು.
+ ಶ್ರೀಮತಿ ಗಂಗಮ್ಮ ಕೋಂ ಫಕ್ಕೀರಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ನೂಲಗೇರಿ.
+ ಶ್ರೀಮತಿ ಶಿವಕ್ಕ ಕೋಂ ರಾಮಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಇಟ್ಟಿಗೆಹಳ್ಳಿ.
+ ಶ್ರೀಮತಿ ದಾಕ್ಷಾಯಣಮ್ಮ ಕೋಂ ಜಯಪ್ಪ ಮತ್ತು ಮಕ್ಕಳು, ಬಲ್ಲೂರು.
+ ಶ್ರೀಮತಿ ಮಾಳಿಗೇರ ಶಾಂತಮ್ಮ ಕೋಂ ದಿ॥ಶಿವಪ್ಪ ಮತ್ತು ಮಕ್ಕಳು, ಹಳೇಬಾತಿ.
+ ಶ್ರೀಮತಿ ತಿಪ್ಪಮ್ಮ ಕೋಂ ಹನುಮಂತಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಹೊಳಲ್ಕೆರೆ.
+ ಶ್ರೀಮತಿ ಧರ್ಮವತಿ ಕೋಂ ರಾಮಪ್ಪ, ಕೆ.ಎಸ್.ಆರ್.ಟಿ.ಸಿ. ಮತ್ತು ಮಕ್ಕಳು, ಕಾಕಬಾಳು.
+ ಶ್ರೀಮತಿ ಸಾಕಮ್ಮ ಕೋಂ ಹನುಮಂತಪ್ಪ ಮತ್ತು ಮಕ್ಕಳು, ಭರಮಸಾಗರ.
+ ದಿ॥ ಶ್ರೀಮತಿ ಗಂಗಮ್ಮ ಕೋಂ ದಿ॥ ಮರದಪ್ಪ ಮತ್ತು ಮಕ್ಕಳು, ಬನ್ನಿಕೋಡು.
+ ಶ್ರೀಮತಿ ಬಸಮ್ಮ ಕೋಂ ಡಾ॥ ಹನುಮಂತಪ್ಪ ಮತ್ತು ಮಕ್ಕಳು, ಬನ್ನಿಕೋಡು.
+ ಶ್ರೀಮತಿ ಯಶೋಧಮ್ಮ ಕೋಂ ಮಲ್ಲಪ್ಪ ಗೊರಪ್ಪರ ಮತ್ತು ಮಕ್ಕಳು, ಸುಣಕಲ್‌ಬಿದರಿ.
+ ಶ್ರೀಮತಿ ಭಾರತಮ್ಮ ಕೋಂ ಲಕ್ಷ್ಮಣಪ್ಪ ಮತ್ತು ಮಕ್ಕಳು, ಎರೇಕುಪ್ಪಿ.
+ ಶ್ರೀಮತಿ ರೇಣುಕಮ್ಮ ಕೋಂ. ದಿ॥ ಹನುಮಂತಪ್ಪ ಮತ್ತು ಮಕ್ಕಳು, ಹಳೇಬಾತಿ.
+ ಮಾಳಿಗೇರ ವಂಶಸ್ಥರು ಮತ್ತು ಬಂಧು-ಮಿತ್ರರು, ಹಳೇಬಾತಿ. ಮೊ. : 94486 66848


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte